ಕಛೇರಿ ಕೊಠಡಿಗಳಿಂದ ಕೂಡಿರುತ್ತದೆ. ಆದ್ದರಿಂದ ಈ ಸಂಕೀರ್ಣದಲ್ಲಿ ಸುಮಾರು 18 ಜನ ಪ್ರವಾಸಿಗರಿಗೆ ವಸತಿ ಸೌಲಭ್ಯ ಒದಗಿಸಬಹುದಾಗಿರುತ್ತದೆ.

ಇ) ಈ ಕಟ್ಟಡದ ನಿರ್ಮಾಣ ಕಾರ್ಯವನ್ನು ಕರ್ನಾಟಕ ಭೂ ಸೇನಾ ನಿಗಮಕ್ಕೆ ವಹಿಸಿಕೊಡಲಾಗಿದೆ. ಕಟ್ಟಡದ ಗುಣಮಟ್ಟದ ಬಗ್ಗೆ ಭೂ ಸೇನಾ ನಿಗಮದೊಡನೆ ಸೂಕ್ತ ಕ್ರಮ ಕೈಗೊಂಡು ಗುಣಮಟ್ಟ ಕಾಯ್ದುಕೊಳ್ಳಲಾಗುತ್ತದೆ.

ಅಧ್ಯಕ್ಷರು: ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಉತ್ತರಗಳನ್ನು ಸದನದ ಮುಂದೆ ಮಂಡಿಸಲಾಯಿತು. ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

(3) ಸಭೆಯ ಮುಂದಿಡಲಾಗುವ ಕಾಗದಪತ್ರಗಳು

ಕಾರ್ಯದರ್ಶಿ: ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತೇನೆ.

1) ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ 1997.

2) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ (ತಿದ್ದುಪಡಿ) ವಿಧೇಯಕ 1997.

(4) ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ಗುಲ್ಬರ್ಗಾ ಜಿಲ್ಲಾ ಪಂಚಾಯತ್‌ನಲ್ಲಿ ನಡೆದಿರತಕ್ಕ ಸ್ಥಾಯಿ ಸಮಿತಿ ಚುನಾವಣೆ ಕುರಿತು.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಇಷ್ಟೆ, ಗುಲ್ಬರ್ಗಾ ಜಿಲ್ಲಾ ಪಂಚಾಯಿತಿನಲ್ಲಿ 23-8-97ರಂದು ಒಂದು ಸ್ಪೆಷಲ್ ಜನರಲ್ ಬಾಡಿ ಮೀಟಿಂಗ್ ಕರೆದಿದ್ದರು. ಅದರಲ್ಲಿ ನಮ್ಮ ಕಾನ್ಸ್ಟಿಟ್ಯೂಷನ್ ಪ್ರಕಾರ ಪಂಚಾಯತಿಯ ಸ್ಟಾಂಡಿಂಗ್ ಕಮಿಟಿಯನ್ನು ಮಾಡಬೇಕು ಎನ್ನುವುದು ಇದೆ. ಆ ಸ್ಟ್ಯಾಂಡಿಂಗ್ ಕಮಿಟಿಯನ್ನು ಮಾಡುವಾಗ ಒಂದು ಮೀಟಿಂಗ್‌ಅನ್ನು ಕರೆದಿದ್ದರು. ಆ ಮೀಟಿಂಗ್‌ನಲ್ಲಿ ಬಹುಶಃ ನಮ್ಮ ಜಿಲ್ಲಾ ಮಂತ್ರಿಗಳು ಹಾಗೂ ಪವರ್ ಮಂತ್ರಿಗಳು ಹಾಜರಿದ್ದರು. ಅದಲ್ಲದೆ ಪಾರ್ಲಿಮೆಂಟಿನ ಸದಸ್ಯರೂ ಸಹ ಇದ್ದರು. ಇವರೆಲ್ಲರೂ ಸಹಿತ ಆದಿವಸದ ಮೀಟಿಂಗ್‌ಗೆ ಹೋಗಿ ಅದರಲ್ಲಿ ಕೆಲವು ಜನ ಸದಸ್ಯರಲ್ಲದೆ ಇರುವವರೂ ಕೂಡ ಹಾಜರಾತಿಯನ್ನು ಮಾಡಿಕೊಂಡಿದ್ದರು. ಮತ್ತು ಕೆಲವು ಸದಸ್ಯರನ್ನು ಹೆದರಿಸಿ, ಅಲ್ಲಿ ಒಬ್ಬರಿಗೊಬ್ಬರು ಎಳೆದಾಡತಕ್ಕ ಪ್ರಸಂಗ ಕೂಡ

ಬಂದಿದೆ. ಎಲ್ಲಿವರೆಗೆ ಬಂದಿದೆ ಅಂದರೆ ಒಬ್ಬೊಬ್ಬ ಕಾಂಗ್ರೆಸ್ ಪಕ್ಷದ ಸದಸ್ಯರನ್ನು ಎಳೆದುಕೊಂಡು, ಲೋಕಶಕ್ತಿಯ ಸದಸ್ಯರನ್ನು ಎಳೆದುಕೊಂಡು ಹೋಗತಕ್ಕ ಪರಿಸ್ಥಿತಿ ಬಂದಿದೆ. ಅದು ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಎದುರಿಗೆ ಜಗಳ. ಚೀಫ್ ಎಕ್ಸಿಕ್ಯೂಟಿವ್ ಆಫೀಸರ, ಡಿ.ಸಿ, ಎಸ್.ಪಿ.ಡಿಓಎಸ್‌ಪಿ, ಅವರೆಲ್ಲರೂ ಕೂಡ ನೋಡುತ್ತಿದ್ದಾರೆ. ಅಲ್ಲಿ ಇಬ್ಬರೂ ರಾಜ್ಯದ ಮಂತ್ರಿಗಳು ಸಹ ಹಾಜರಿದ್ದರು. ಇದಕ್ಕೆ ಪ್ರೋತ್ಸಾಹ ಕೊಟ್ಟರೆ, ಅಧ್ಯಕ್ಷರೆ, ಯಾವ ರೀತಿಯಾಗಿ ಆಡಳಿತದಲ್ಲಿ ಜಿಲ್ಲಾಪಂಚಾಯತ್ ಅನ್ನು ನಡೆಸಬೇಕು, ಮತ್ತು ಆಡಳಿತದಲ್ಲಿ ಒಂದು ವಿಶ್ವಾಸ ಮೂಡಬೇಕು. ಏಕೆಂದರೆ ಯಾರಿಗೆ ತೋಳ ಬಲ ಇದೆ, ಶಕ್ತಿ ಇದೆ, ಅವರು ತಮ್ಮ ಬಲದ ಪ್ರದರ್ಶನವನ್ನು ಮೀಟಿಂಗ್‌ನಲ್ಲಿ ಮಾಡಿದರೆ, ಅದು ಎಷ್ಟರಮಟ್ಟಿಗೆ ಸರಿ ಎನ್ನತಕ್ಕ ಪ್ರಶ್ನೆ ಇವತ್ತು ಬಂದಿದೆ. ಇತ್ತೀಚಿನ ದಿವಸಗಳಲ್ಲಿ ಏಕೆ ಹೀಗೆ ಆಗುತ್ತಿದೆಯೋ ನನಗೆ ಗೊತ್ತಿಲ್ಲ. ಹಿಂದೆ ಎಂದೂ ಕೂಡ ಜಿಲ್ಲಾ ಪಂಚಾಯತ್‌ನಲ್ಲಾಗಲೀ, ತಾಲ್ಲೂಕು ಪಂಚಾಯತ್‌ನಲ್ಲಾಗಲೀ ನಡೆದಿಲ್ಲ. ಸುಮಾರು 26 ವರ್ಷಗಳಿಂದ ನಾನು ಮತ್ತು ಶ್ರೀಮಾನ್ ಧರ್ಮಸಿಂಗ್‌ರವರು ಸತತವಾಗಿ ಅಲ್ಲಿ ನಮ್ಮ ಪ್ರತಿನಿಧಿತ್ವವನ್ನು ಮಾಡುತ್ತಿದ್ದೇವೆ. ಆದರೆ ಒಂದು ದಿನಾನೂ ಕೂಡ ಹೀಗೆ ಎಳೆದಿದ್ದು, ತಂದು ಕೂಡಿಸಿದ್ದು, ಹೊಡೆದಾಟ ಮಾಡಿದ್ದು, ಅಥವಾ ಹಿಡಿದುಕೊಂಡು ಹೋಗುವುದು ಹಿಂದೆ ಎಂದೂ ಕೂಡ ಆಗಿಲ್ಲ, ಮುಂದೆ ಕೂಡ ಆಗುತ್ತದೋ ಇಲ್ಲವೋ ಗೊತ್ತಿಲ್ಲ. ಆದರೆ ಇವತ್ತು ಮಾತ್ರ, ಇದು ಅವರ ಕಣ್ಣೆದುರಿನಲ್ಲೇ ನಡೆಯಬೇಕಾದರೆ ಅದಕ್ಕೆ ಪ್ರೋತ್ಸಾಹ ಯಾರದು? ಏಕೆ ಇದನ್ನು ಮಾಡಿದ್ದಾರೆ ಎನ್ನತಕ್ಕದ್ದನ್ನು ಈ ಸದನದ ಮುಂದೆ ಅವರು ಹೇಳಬೇಕು. ತಮ್ಮ ಗಮನಕ್ಕೆ ಇದನ್ನು ಏಕೆ ತರತ್ತೇನೆ ಎಂದರೆ ಅಧ್ಯಕ್ಷರೆ, ಅಲ್ಲಿಂದ ನನಗೆ ಜಿಲ್ಲಾ ಪಂಚಾಯತ್ ಕಲ್ಬುರ್ಗಿ ಛೇರ್ಮನ್‌ರವರಿಂದ ನನಗೆ ಒಂದು ಫ್ಯಾಕ್ಸ್ ಬಂದಿದೆ. ಮತ್ತುಪತ್ರಿಕೆಯಲ್ಲೂ ಕೂಡ ಇದು ಬಂದಿದೆ. ನಾವು ಅಲ್ಲಿ ನಮ್ಮ ಅಧ್ಯಕ್ಷರೇ, ಇರಬೇಕು, ಸ್ಟಾಡಿಂಗ್ ಕಮಿಟಿ ಛೇರ್ಮನ್ ಇರಬೇಕು, ಅಥವಾ ಇಂಥವರೇ ಇರಬೇಕು ಎನ್ನುವುದು ನಮ್ಮ ಹಠ ಅಲ್ಲ. ಪ್ರಜಾಪ್ರಭುತ್ವದಲ್ಲಿ ಯಾರಿಗೆ ಮೆಜಾರಿಟಿ ಬರುತ್ತದೋ, ಅವರಿಗೆ ಬಿಟ್ಟು ಒತ್ತಾಯ ಮಾಡದೆ, ಯಾರು ಆರಿಸಿ ಬಂದರೂ ನಮಗೆ ಏನೂ ಅದರಲ್ಲಿ ಆಸಕ್ತಿ ಇಲ್ಲ ನಮಗೆ ಏನು ಅಂದರೆ ರಾಜ್ಯ ಸುಲಿಲಿತವಾಗಿ ನಡೆಯಬೇಕು, ಒಳ್ಳೆಯ ರೀತಿಯಲ್ಲಿ ನಡೆಯಬೇಕು, ಆಡಳಿತ ಕಾರ್ಯಗಳು ಬೇಗ ಮುಗಿಯಬೇಕು ಎಂಬುದು ನಮ್ಮ ಇಚ್ಛೆ. ನಾನು ಹಿಂದೆ ಹೆಗಡೆಯವರ ಕಾಲದಲ್ಲಿ ವಿರೋಧಪಕ್ಷದಲ್ಲಿದ್ದೇನೆ, ಬೊಮ್ಮಾಯಿರವರ ಕಾಲದಲ್ಲಿ ವಿರೋಧ ಪಕ್ಷದಲ್ಲಿದ್ದೆ. ಏಳು ವರ್ಷಗಳ ಕಾಲ ವಿರೋಧಪಕ್ಷದಲ್ಲಿದ್ದೆ. ಈಗ ಮೂರು ವರ್ಷ. ಒಟ್ಟು 10 ವರ್ಷಗಳಲ್ಲಿ ಯಾವುದಾದರೂ ಒಂದು ಇನ್ಸಿಡೆಂಟ್ ನನ್ನ ಕ್ಷೇತ್ರದಲ್ಲಿ ನಡೆದಿಲ್ಲ. ತಾಲ್ಲೂಕು ಪಂಚಾಯತ್‌ನಲ್ಲಿ ನನ್ನ ಮೆಜಾರಿಟಿ ಬರಲಿಲ್ಲ. ಏಕೆಂದರೆ ಡಬಲ್ ಮೆಂಬರ್ ಕಾನ್ಸಿಟ್ಯೂಯೆನ್ಸಿನಲ್ಲಿ ಕೆಲವು ಭಾಗಗಳಲ್ಲಿ ಕಳೆದುಕೊಂಡಿದ್ದೇವೆ. ಒಂದು ದಿವಸವೂ ಹೋಗಿ ನಾನು ಅಟೆಂಡ್ ಆಗಿಲ್ಲ. ಏಕೆ ಅಟೆಂಡ್ ಆಗಲಿಲ್ಲ ಎಂದರೆ ಅಲ್ಲಿ ಹೋಗಿ ಕುಳಿತುಕೊಂಡರೆ ಮುಜುಗರ ಬರುತ್ತದೆ.

ಅಲ್ಲಿ ಕೆಲವು ಅಧಿಕಾರಿಗಳೂ ಕೂಡ ಮಾತನಾಡತಕ್ಕಂಥ ಪೋಸಿಷನ್‌ನಲ್ಲಿ ಇರುವುದಿಲ್ಲ. ಅದಕ್ಕಾಗಿ ನಾವು ಅನೇಕ ಸಾರಿ ಅವಾಯ್ಡ್ ಮಾಡುತ್ತೇವೆ. ಕೆಳಮಟ್ಟದಲ್ಲಿ ರಾಜಕೀಯ ತರಬಾರದು, ರಾಜಕೀಯದ ಒಂದು ಮುಖ್ಯವಾದ ಗುರಿ ಸಾಧನೆ ಎನ್ನತಕ್ಕಂಥದ್ದು ಮಾಡಬಾರದು ಎಂದು ಅನೇಕಸಾರಿ ನಾವು ಅಂತಹ ಸಭೆಗಳಿಗೆ ಹೋಗತಕ್ಕಂಥದ್ದು ಅಥವಾ ಅಂತಹ ಸಭೆಗಳಲ್ಲಿ ಭಾಗವಹಿಸತಕ್ಕಂಥದ್ದನ್ನು ಕಾನ್‌ಫ್ಲಿಕ್ಟ್ ಆಗಬಾರದೆಂದು ತಪ್ಪಿಸುತ್ತೇವೆ. ಆದರೆ ಇಲ್ಲಿ ಎದುರುಗಡೆ ಕೂತು ವ್ಯಾನ್‌ಗಳನ್ನು ಕಳುಹಿಸಿ ಜನರನ್ನು ಹಿಡಿದುಕೊಂಡು ಬರುವುದು ಮಾಡಿದರೆ ಹೇಗೆ? ಇದು ಅವರ ಕಣ್ಣೆದುರು ಆದಂಥ ಘಟನೆ. ಬೇಕಾದರೆ ವಿಡಿಯೋ ಕ್ಯಾಸೆಟ್ಸ್‌ಗಳು ಇವೆ ಅದನ್ನು ತಾವು ತರಿಸಿ ನೋಡಬಹುದು. ಇದರಲ್ಲಿ ಸರ್ಕಾರ ನೇರವಾಗಿ ಹಸ್ತಕ್ಷೇಪ ಮಾಡುತ್ತಿದೆ ಎಂದು ತಮ್ಮ ಗಮನಕ್ಕೆ ತರಬೇಕೆಂದು ಐದು ನಿಮಿಷದಲ್ಲಿ ಬ್ರೀಫ್ ಆಗಿ ಮುಗಿಸುತ್ತೇನೆ.

"The election to five standing committees of Gulbarga Zilla Panchayat was marred by controversies with the Janata Dal and other opposition parties sweeping polls sitting in the absence of the ruling Lok Shakti and Congress party members. The meeting began on a volatile note with accusations being hurled by Janata Dal leaders and the fence sitters in the Lok Shakti and Congress. Asking them either to boycot the elections or vote with the Janata Dal Minutes before the meeting began the leader of the Congress group Mukram Khan and Shivaiah Guttedar who was expelled from the Congress recently came to blows outside the meeting hall when Mr.Guttedar attempted to take away forcibly a Congress Zilla Panchayat member Mr.Annaraya from the meeting" ಇದು ಹಿಂದೂ ಪತ್ರಿಕೆಯಲ್ಲಿ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ, ಪ್ರಜಾವಾಣಿ ಪತ್ರಿಕೆಯಲ್ಲಿ ಎಲ್ಲದರಲ್ಲೂ ಬಂದಿದೆ. ತಾವು ನೋಡಬಹುದು. ಅದಲ್ಲದೆ ಈವತ್ತು ಪ್ಯಾಕ್ಸ್ ಮುಖಾಂತರ ಕೂಡ ಅಥೆಂಟಿಕ್ ಆಗಿ ನಮಗೆ ಈ ಮಾಹಿತಿ ಬಂದಿದೆ "Khan prevented from Guttedar from taking away Annaraya away and there was a wordy duel between the two. However, the police intervened and brought the situation under control. Another woman member of the Congress was seen crying outside the meeting hall and

the party members attributed this to the pressure being brought upon her by Janata Dal leaders to join them in the voting in the election. The President, Mr.Shivasharanappa Dhaded who entered the meeting hall and seeing the volatile situation outside, adjourned the meeting stating that there was no protection to the lives of the members. After adjourning the meeting, Mr.Dhaded followed by Lok Shakthi and Congress stopped out. However, the two BJP members, the lone communist party of India member and two unattached members sat in the meeting hall. The adjournment was objected to by Janata Dal Members who termed it as illegal. The district Incharge Minister Sri Mallikaiah Guttedar and the Minister of State for power Mr.Sharanabasappa Darshanapur and the Janata Dal Member of Parliament Mr.Qamarul Islam supported the plea that the adjournment was illegal and meeting should proceed and the day's agenda should be conducted. They told the Chief Executive Officer of the Zilla Panchayat Mr.Kapil Mohan to proceed with the meeting. They pressurised the elections of the senior member among those present to conduct the election. Even before Mr.Mohan replied to this, subhash Rathod Janata Dal proposed the name of Sri Thimanna to preside which was seconded by Sri Srikanth Tadkal and at this stage Mr.Mohan announced that he would give his ruling in ten minutes and went out of the meeting." ನಾನು ಹೇಳತಕ್ಕಂಥದ್ದು ಏನು ಎಂದರೆ ಒಂದು ಸಲ ಜಿಲ್ಲಾಪಂಚಾಯತ್ ಅಧ್ಯಕ್ಷರು ಮೀಟಿಂಗ್ ಕರೆದು ಮೀಟಿಂಗ್‌ನಲ್ಲಿ ಸ್ಟ್ಯಾಂಡಿಂಗ್ ಕಮಿಟಿ ಎಲೆಕ್ಷನ್ ಮುಂದೆ ಮಾಡತಕ್ಕಂಥದ್ದು ಇದೆ ಎಂದಾಗ ಗಲಾಟೆ ನಡೆದಮೇಲೆ ಮೀಟಿಂಗನ್ನು ಅಡ್ಜರ್ನ್ ಮಾಡಿದರು. ಅಧ್ಯಕ್ಷರು, ಉಪಾಧ್ಯಕ್ಷರು ಸದಸ್ಯರು ಮೀಟಿಂಗ್ ಅಡ್ಜರ್ನ್ ಮಾಡಿ ಹೊರಗೆ ಬಂದಮೇಲೆ ಮಂತ್ರಿಗಳು ಅಲ್ಲೇ ಕುಳಿತುಕೊಂಡು ಸಿ.ಇ.ಓ. ಕೈ ಹಿಡಿದು ನೀವು ಕುಳಿತುಕೊಂಡು ಇದನ್ನು ಮಾಡಲೇಬೇಕು ಎಂದು ಅವರನ್ನು ಒತ್ತಾಯ ಮಾಡಿ ಅವರ ಪೈಕಿಯ ಒಬ್ಬ

ಸೀನಿಯರ್ ಮೆಂಬರನ್ನು ಎಲೆಕ್ಟ್ ಮಾಡಿ ಪ್ರಿಸೈಡ್ ಓವರ್ ಮಾಡಿಸಿ ಐದು ಕಮಿಟಿಯ ಚೇರ್ಮನ್‌ರನ್ನು ಡಿಕ್ಲೇರ್ ಮಾಡಿಕೊಂಡಿದ್ದಾರೆ. ಹಾಗೆ ಡಿಕ್ಲೇರ್ ಮಾಡಿ ಪ್ರೆಸ್ ಕಾನ್ಫೆರೆನ್ಸ್‌ಗೆ ಕಳುಹಿಸಿ ಹೊರಗೆ ಬರತಕ್ಕಂಥದ್ದಾದರೆ ಅಧ್ಯಕ್ಷರು, ಉಪಾಧ್ಯಕ್ಷರು ತಾಲ್ಲೂಕು ಪಂಚಾಯತ್ ಆ್ಯಕ್ಟ್ ಏಕೆ ಇರಬೇಕು? ಯಾವಾಗ ಅಧ್ಯಕ್ಷರು, ಉಪಾಧ್ಯಕ್ಷರು ಕರೆದರೂ ಮೀಟಿಂಗಕ್ಕೆ ಬರುವುದಿಲ್ಲ. ಆ ಸಂದರ್ಭದಲ್ಲಿ ಮಾತ್ರ ಇರುವಂಥ ಸದಸ್ಯರಲ್ಲಿ ಯಾರಾದರೊಬ್ಬರು ಪ್ರಿಸೈಡ್ ಮಾಡುವುದಕ್ಕೆ ಕಾನೂನು ಇದೆ. ಈ ಸಭೆಯಲ್ಲಿ ಕೂಡ ತಾವು ಬಂದು ಮೀಟಿಂಗನ್ನು ಅಡ್ಜರ್ನ್ ಮಾಡಿ ಹೋದಮೇಲೆ ನೀವು ಕರೆಯುವವರೆಗೆ ನಾವು ಪುನಃ ಸೇರುವ ಹಾಗಿಲ್ಲ. ಅದೇ ರೀತಿ ತಾಲ್ಲೂಕು ಪಂಚಾಯತ್‌ನಲ್ಲಿ ಹಾಗೂ ಜಿಲ್ಲಾಪಂಚಾಯತ್‌ನಲ್ಲಿ ಇರತಕ್ಕಂಥದ್ದು. ಒಂದು ಸಾರಿ ನೋಟೀಸ್ ಕೊಟ್ಟು ಅಧ್ಯಕ್ಷರು ಸಭೆ ಸೇರಿ ನಂತರ ಅಡ್ಜರ್ನ್ ಎಂದು ಹೇಳಿದಮೇಲೆ ಪುನಃ ಇವರು ಸೇರತಕ್ಕಂಥದ್ದಕ್ಕೆ ಅಧಿಕಾರ ಇಲ್ಲ. ಅನ್‌ಲೆಸ್ ಇನ್ನೊಂದು ನೋಟೀಸ್ ಕೊಟ್ಟು ಅವರು ಬರದೇ ಇದ್ದರೆ ವೋಟ್ ಆಫ್ ನೋ ಕಾನ್ಫಿಡೆನ್ಸ್ ಮಾಡಿ ಅವರನ್ನು ತೆಗೆದುಹಾಕಿ ಇವರು ಮಾಡಬೇಕು. ಇಲ್ಲ ಅವರು ಮೆಜಾರಿಟಿ ಇದ್ದರೆ ಅಜೆಂಡಾ ಒದಗಿಸಿದ್ದರೆ ಇವರು ಕರೆದು ಸಿಎಸ್ ಇದ್ದಾಗ ಇದ್ದ ಸದಸ್ಯರಲ್ಲಿ ಒಬ್ಬರನ್ನು ಪ್ರಿಸೈಡ್‌ಓವರ್ ಮಾಡಲಿಕ್ಕೆ ಹಚ್ಚಿ ಎಲೆಕ್ಟ್ ಮಾಡಬೇಕು. ಅದು ಬಿಟ್ಟು ಅಧ್ಯಕ್ಷರು ಅಡ್ಜರ್ನ್ ಮಾಡುತ್ತಾರೆ. ಉಪಾಧ್ಯಕ್ಷರು, ಸದಸ್ಯರು ಎಲ್ಲಾ ಹೊರಗೆ ಹೋಗುತ್ತಾರೆ. ಇವರು ಮಾತ್ರ ಕೆಲವು ಸದಸ್ಯರನ್ನು ಕೂಡಿಸಿಕೊಂಡು ಅವರಿಗೆ ಪ್ರಿಸೈಡ್ ಓವರ್ ಮಾಡಲಿಕ್ಕೆ ಹಚ್ಚಿ ಇವರೇ ಸ್ಟ್ಯಾಂಡಿಂಗ್ ಕಮಿಟಿ ಗಳಿಗೆ ಎಲೆಕ್ಟ್ ಮಾಡಿಸಿ ಬರಬೇಕಾದರೆ, ಯಾರು ಕಾನೂನು ರಕ್ಷಣೆ ಮಾಡಬೇಕು, ಯಾರು ಜಿಲ್ಲಾಪಂಚಾಯತ್ ಆ್ಯಕ್ಟನ್ನು ಜಿಲ್ಲೆಯಲ್ಲಿ ಇಂಪ್ಲಿಮೆಂಟ್ ಮಾಡಬೇಕು ಅವರೇ ಕೂತು ಕಾನೂನಿಗೆ ವಿರುದ್ಧ ಕೆಲಸ ಮಾಡಿದರೆ ನಾವೇನು ಹೇಳಬೇಕು? ಅದು ಎಲ್ಲಿಯವರೆಗೆ ಹೀಗೆ ಹೋಗಬೇಕು? ''ಏಕೆ ಅದು ಬಂದಿದೆ. ಇಂತಹ ನಡವಳಿಕೆಯಿಂದ ಇವೊತ್ತು ಲಾ ಆ್ಯಂಡ್ ಆರ್ಡರ್ ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅದು ಅಳಂದ್ ಘಟನೆ ಇರಬಹುದು, ಅಫಜಲ್‌ಪುರ್ ಘಟನೆ ಇರಬಹುದು, ಸೇಡಂ ಘಟನೆ ಇರಬಹುದು ಮತ್ತು ಜಿಲ್ಲಾಪಂಚಾಯತ್‌ನಲ್ಲಿ ಆದಂಥ ಈ ರೀತಿಯಾದ ನಡವಳಿಕೆ ನೋಡಿದರೆ ನಾಳೆ ಜನರಲ್ಲಿ ಏನು ಭಾವನೆ ಬರುತ್ತದೆ ಎಂದರೆ ಓ ಸರ್ಕಾರ ಏನೋ ಮಾಡಿದರೂ ಅವರಿಗೆ ಬಾರಾಖೂನ್ ಮಾಫ್, ಎಂದು ಹೇಳಿದ ಹಾಗೆ ಆಗಬಾರದು ಅವರು ಅಲ್ಲಿ ಮಾಡಿದ್ದೇ ಸರಿ. ಅವರು ಅಲ್ಲಿನ ವಾತಾವರಣವನ್ನು ಕೆಡಿಸಿ ಅಲ್ಲಿರತಕ್ಕಂಥ ಬಡವರಿಗೆ ತೊಂದರೆಯಾಗಿದೆ. ಅಲ್ಲಿಯ ಬಡವರಿಗೆ ಬಂದಿರತಕ್ಕಂಥ ಧೈರ್ಯವನ್ನು ವ್ಯವಸ್ಥಿತ ರೀತಿಯಲ್ಲಿ ಕುಗ್ಗಿಸತಕ್ಕಂಥ ತಂತ್ರ ನಡೆದಿದೆ. ಅದಕ್ಕೆ ಪ್ರೋತ್ಸಾಹವನ್ನು ಮಂತ್ರಿಗಳು ಮಾಡುತ್ತಿದ್ದಾರೆ ಎಂದು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇಲ್ಲಿವೆಂದರೆ ಅವರಿಗೆ ಏಕೆ ಬೇಕು? ನ್ಯಾಯವಾಗಿ ನಡೆಯಲಿ ಕಾನೂನು ಪ್ರಕಾರ ನಡೆಯಲಿ ಎಂದು ಬಿಟ್ಟು ಬರುವುದು ಬಿಟ್ಟು, ಅವರೇ ಜನರನ್ನು ಕರೆದುಕೊಂಡು ಹೋಗಿ, ಹತ್ತಾರು ಜನರನ್ನು ಅವರ ಜೊತೆ ಹಾಲಿನಲ್ಲಿ ಕರೆದುಕೊಂಡು

ಹೋಗತಕ್ಕಂಥದ್ದು ನೋಡಿದರೆ, ಇದು ಯಾವ ಕಾನೂನು ಇದೆ, ಯಾವ ನೀತಿ ಇದೆ, ಯಾವ ರೂಲ್ಸ್ ಇದೆ. ಅದಕ್ಕಾಗಿ ಇದರ ಬಗ್ಗೆ ನೀವು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಅವರು ಯಾವಾಗ ಹೋದರು, ಎಷ್ಟು ಗಂಟೆಗೆ ಹೋದರು ಮತ್ತು ಏನು ಮೀಟಿಂಗ್ ಮಾಡಿದರು ಎಂದು ಅವರು ತಿಳಿಸಬೇಕು. ಇವರು ನೇರವಾಗಿ ರಾಜಕೀಯ ಮಾಡುವುದಕ್ಕೆ ಹೋಗುವುದಿಲ್ಲ. ಇವರು ರಾಜಕೀಯ ಮಾಡುವುದು ಹೇಗೆ ಎಂದರೆ ಅವನಿಗೆ ಹಿಡಿದು ತಾ, ಇವನಿಗೆ ಹಿಡಿದು ತಾ, ಅವನಿಗೆ ಹೆದರಿಸುವುದು, ಇವನಿಗೆ ಹೆದರಿಸುವುದು ಮಾಡಿ, ತೋಳು ಬಲದ ಮೇಲೆ, ಶಕ್ತಿಯ ಮೇಲೆ ರಾಜಕೀಯ ಮಾಡುವುದಕ್ಕೆ ಹೊರಟರೆ ಜನ ಇವತ್ತಲ್ಲ ನಾಳೆ ಜನ ಅವರನ್ನು ಪಾಠ ಕಲಿಸುತ್ತಾರೆ. ಇಲ್ಲಿಯವರೆಗೆ ಈ ರೀತಿ ಗುಲಬರ್ಗಾದಲ್ಲಿ ನಡೆದಿರಲಿಲ್ಲ. ನಾನು ಆ ಭಾಗದಲ್ಲಿ 25-26 ವರ್ಷದಿಂದ ರಾಜಕೀಯ ಮಾಡುತ್ತಿದ್ದೇನೆ. ಇದುವರೆಗೆ ಶಾಂತಿಯುತವಾಗಿತ್ತು. ಸ್ವಲ್ಪ ದಿವಸದ ಹಿಂದೆ ದಬ್ಬಾಳಿಕೆ ಇತ್ತು ಆದರೆ, ಅದಕ್ಕೆ ಜನ ರಿವೋಲ್ಟ್ ಆಗಿ ಬಡವರಿಗೆ ಬೆಂಬಲ ಕೊಡತಕ್ಕಂಥದ್ದನ್ನು ಮಾಡಿಕೊಂಡು ಬಂದಿದ್ದಾರೆ. ಆದರೆ ಪುನಃ ಆ ದಬ್ಬಾಳಿಕೆಯ ಪ್ರಯತ್ನ ಇವತ್ತು ಯಾರಾದರೂ ಮಾಡಿದರೆ ಖಂಡಿತವಾಗಿ ಆ ಭಾಗದ ಜನ ಸಹಿಸುವುದಕ್ಕೆ ಹೋಗುವುದಿಲ್ಲ, ನೀವು ಪ್ರಾಯಶ್ಚಿತ ಪಡಬೇಕಾಗುತ್ತದೆ. ಬರೀ ಹಣ ಮತ್ತು ಅಧಿಕಾರದಿಂದ ಕ್ಷೇತ್ರದ ಉದ್ಧಾರ ಆಗುವುದಿಲ್ಲ. ನಮ್ಮ ಹತ್ತಿರ ಅಧಿಕಾರ ಇದೆ, ಹಣ ಇದೆ ಎಂದು ಏನು ಬೇಕಾಗಿದ್ದು ಮಾಡುತ್ತೇನೆ ಎಂದರೆ ಸಾಲದು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜಾ ತತ್ವದ ಪ್ರಕಾರ ನಡೆಯಬೇಕಾಗುತ್ತದೆ. ಇದಕ್ಕಾಗಿ ತಾವು ಮಂತ್ರಿಗಳು ಏಕೆ ಹೋಗಿದ್ದರು, ಏನು ಕೆಲಸಕ್ಕಾಗಿ ಹೋಗಿದ್ದರು, ಮತ್ತು ಯಾವ ರೀತಿ ಕಾನೂನು ವಿರುದ್ಧ ಸ್ಟ್ಯಾಂಡಿಂಗ್ ಕಮಿಟಿ ಚುನಾವಣೆ ನಡೆದಿದೆ. ಮತ್ತು ಮೀಟಿಂಗ್ ಅಡ್ಜರ್ನ್ ಆದಮೇಲೆ ಏನು ನಡೆದಿದೆ ಎಂಬುದರ ಬಗ್ಗೆ ಸವಿಸ್ತಾರವಾದ ಚರ್ಚೆ ಈ ಸಭೆಯಲ್ಲಿ ನಡೆಯಲು ಮತ್ತು ನಿಲುವಳಿ ಸೂಚನೆಗೆ ತಾವು ಅನುಮತಿಯನ್ನು ಕೊಡಬೇಕು ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

12.10 ಪಿ.ಎಂ

+ ಶ್ರೀ ಆರ್.ಧರ್ಮಸಿಂಗ್ (ಜೇವರ್ಗಿ): ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಗುಲ್ಬರ್ಗಾ ಜಿಲ್ಲೆಯಲ್ಲಿ ವಿಶೇಷವಾಗಿ ಈ ರೀತಿಯ ಸಭೆ ಮೊಟ್ಟಮೊದಲನೆಯದಾಗಿ ನಡೆದಿದೆ, ಇದರ ಬಗ್ಗೆ ಅತಿಶಯೋಕ್ತಿ ಮಾಡುತ್ತಿಲ್ಲ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳೂ ಕೂಡ ಇಲ್ಲಿ ಇದ್ದಾರೆ. ನಾನೂ ಕೂಡ accidentally I was in Gulbarga. ಜಿಲ್ಲಾ ಪರಿಷತ್‌ನಲ್ಲಿ ಈ ರೀತಿಯ ಘಟನೆ ನಡೆಯುತ್ತಿದೆ, ಒಬ್ಬರ ಮೇಲೆ ಮತ್ತೊಬ್ಬರು ಆರೋಪ, ಪ್ರತ್ಯಾರೋಪವಾಗುತ್ತಿದೆ ಎಂದು ಹೇಳಿ ಒಂದು ಮೀಟಿಂಗ್ ಕೂಡ ನಾನು ಅಟೆಂಡ್ ಆಗುತ್ತಿಲ್ಲ. ಇವೊತ್ತು ಅಲ್ಲಿ ನಮ್ಮ ಶರಣಪ್ಪ ಗಡ್ಡದ್‌ರವರು ಅಧ್ಯಕ್ಷರಾಗಿದ್ದಾರೆ. ಕಳೆದ ಸಭೆಯಲ್ಲಿ ದಿನಾಂಕ 23ನೇ ತಾರೀಖಿನಂದು ಆ ಜಿಲ್ಲಾಪರಿಷತ್‌ನಲ್ಲಿ ಏನು

ಚುನಾವಣೆಯಾಗಬೇಕಾಗಿದೆ ಅದರ ಬಗ್ಗೆ ಒಂದು ಅಜೆಂಡಾವನ್ನು ಕೂಡ ಇಶ್ಯೂ ಮಾಡಿದ್ದಾರೆ. ಆ ಅಜೆಂಡಾದಲ್ಲಿ ಎಲ್ಲಾ ಕಮಿಟಿ ಚುನಾವಣೆಗಳು ಅಧ್ಯಕ್ಷರ ಸಮ್ಮುಖದಲ್ಲಿಯೇ ನಡೆಯಬೇಕೆಂದು ಹೇಳಲಾಗಿದೆ. That's the procedure. ಅದಕ್ಕೆ ಸಂಬಂಧಪಟ್ಟಂತೆ ಏಡಿಯೋ ಕ್ಯಾಸೆಟ್ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಸುಮಾರು ಮುರ್ನಾಲ್ಕು ಸಾವಿರ ಜನರು ಅಲ್ಲಿದ್ದಾರೆ, ದರ್ಶನಾಪುರ್‌ರವರು ಇದರ ಬಗ್ಗೆ ಸ್ಪಷ್ಟೀಕರಣ ಏನು ಕೊಡುತ್ತಾರೋ ಕೊಡಲಿ. ನಮ್ಮ ಬಾಪೂಗೌಡ ದರ್ಶನಾಪುರ್‌ರವರ ಮಗ ಕೂಡ ಇದ್ದಾರೆ. ಅವರೂ ಕೂಡ ಸಾಕಷ್ಟು ವೆರಿಫೈ ಮಾಡುತ್ತಿದ್ದಾರೆ. ಮಾಲೀಕಯ್ಯ ಗುತ್ತೇದಾರ್ ಬಗ್ಗೆ ನಮಗೆ ಅಸೂಯೆ ಏನೂ ಇಲ್ಲ. ಎಷ್ಟೋ ಬಾರಿ ಗುತ್ತೇದಾರ್‌ರವರಿಗೆ ನೀವು ಚೆನ್ನಾಗಿ ಕೆಲಸ ಮಾಡಿ ಎಂದು ಹೇಳಿದ್ದೇನೆ. ಬೇರೆ ಕಡೆ ನಡೆಯುತ್ತದೆ, ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಎಲ್ಲೂ ಇಲ್ಲ. ನಾವು ಜಿಲ್ಲಾ ಪರಿಷತ್ ಕೆಲಸಗಳಲ್ಲಾಗಲೀ ಮತ್ತು ಬೇರೊಂದು ಕೆಲಸಗಳಲ್ಲಾಗಲೀ ಹೆಚ್ಚಿನ ಸಹಕಾರವನ್ನು ಕೊಡುತ್ತಿದ್ದೇವೆ. ಇವತ್ತು ಕಾನೂನು ಮತ್ತು ಸುವ್ಯವಸ್ಥೆ ಇಲ್ಲವೇ ಇಲ್ಲ, ಇಲ್ಲಿ ರೊಷನ್ ಬೇಗ್‌ರವರು ಇವೊತ್ತು ಇಲ್ಲ. ನನ್ನ ಕ್ಷೇತ್ರದಲ್ಲಿ ಇವೊತ್ತಿನ ದಿವಸ ಜಿಲ್ಲಾ ಪರಿಷತ್ ಚುನಾವಣೆಯಾದರೆ, ಪಂಚಾಯತ್‌ನಲ್ಲಿ ಜನತಾದಳ ಬಂದಿಲ್ಲ, ಬೇರೆ ಪಕ್ಷದವರೂ ಕೂಡ ಬಂದಿಲ್ಲ, ಪೂರ್ಣ ನಮ್ಮದೇ ಅಲ್ಲಿ ಬಂದಿದೆ. ಜಿಲ್ಲಾ ಪರಿಷತ್‌ನಲ್ಲಿ ಕೂಡ 5ರಲ್ಲಿ 4 ನಾವು ಬಂದಿದ್ದೇವೆ. ಇವೊತ್ತು ಎಲ್ಲಾ ತಾಲ್ಲೂಕು ಬಿಟ್ಟು ಜೇವರ್ಗಿ ಬಗ್ಗೆ ಅವರು ಕಾನ್ಸನ್‌ಟ್ರೇಷನ್ ಮಾಡುತ್ತಿದ್ದಾರೆ. ಅಲ್ಲಿಯ ಮೈನಾರಿಟಿ ಕಮ್ಯುನಿಟಿಯ ಒಬ್ಬ ಮುಸ್ಲಿಂ ಹೆಣ್ಣು ಮಗಳು 5 ದಿವಸಗಳ ಕಾಲ ನಾಪತ್ತೆಯಾಗಿ ಒಬ್ಬರ ಮನೆಯಲ್ಲಿದ್ದಳು. ಯಾರ ಮನೆಯಲ್ಲಿ ಇದ್ದಾರೆ ಎಂಬುದನ್ನು ಅಧ್ಯಕ್ಷರೇ ತಾವೇ ತರಿಸಿ ನೋಡಬಹುದು. ಇನ್ನು ಮಲ್ಲಣ ಯಾದಗಿರಿ ಎಂಬ ಹಿಂದುಳಿದ ವರ್ಗದ ವ್ಯಕ್ತಿ ಇದುವರೆಗೂ ಎಲ್ಲಿ ಇದ್ದಾನೆ ಎಂಬ ಬಗ್ಗೆ ತಿಳಿದಿಲ್ಲ. ನಿನ್ನೆ ನಾನು ಎಸ್.ಪಿ.ಯವರೊಡನೆ ಮಾತನಾಡಿದ್ದೇನೆ, ಎಸ್.ಪಿ.ಯವರು ಲಿಖಿತಮೂಲಕ ಕೊಡಿ ಎಂದಿದ್ದಾರೆ, ಮೇಘಾರ್ ಕುಲಕರ್ಣಿ ಎನ್ನುವ ನಮ್ಮ ಶಹಾಪುರ್ ತಾಲ್ಲೂಕಿನ ನಮ್ಮ ಪಕ್ಷದವರಾದ ಇಬ್ಬರೂ ಕೂಡ ಇದುವರೆಗೆ ಇಲ್ಲ. ಈ ರೀತಿಯ ವ್ಯವಹಾರ ಯಾರಿಗೂ ಸರಿ ಎನ್ನಿಸುವುದಿಲ್ಲ, ಇದರ ಬಗ್ಗೆ ಜನಾಭಿಪ್ರಾಯ ಕೂಡ ಬರುತ್ತಿದೆ. ಏಕೆಂದರೆ ಈ ರೀತಿಯಲ್ಲಿ ಸದಸ್ಯರನ್ನು ಬಲಾತ್ಕಾರವಾಗಿ ಒಂದು ಕಡೆಯಲ್ಲಿ ತೆಗೆದುಕೊಂಡು ಹೋಗಿ ಇಟ್ಟು ನೀವು ಮೆಜಾರಿಟಿಯನ್ನು ಮಾಡಿಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡುತ್ತಿದ್ದೀರಿ. ಚುನಾವಣೆ ಪ್ರಜಾಪ್ರಭುತ್ವದಲ್ಲಿ ಇದೆ, ಅದರಂತೆ ನೀವು ಆರಿಸಿತನ್ನಿ, ಯಾರು ಬೇಡವೆನ್ನುತ್ತಾರೆ. By hook or crook, ನಾವೇನೂ ಅಲ್ಲಿ ಪ್ರಚೋದನೆ ಮಾಡುವುದಕ್ಕೆ ಬಂದಿಲ್ಲ. ಜನತಾದಳದವರೇ 11 ಮಂದಿ ಬಂದಿದ್ದಾರೆ, ಲೋಕಶಕ್ತಿ ಬಂದಿದ್ದಾರೆ, ಅಲ್ಲಿ ಇವೊತ್ತಿನ ದಿವಸ ನಮ್ಮ ಬೆಂಬಲದಿಂದ ಲೋಕಶಕ್ತಿಯವರು ಅಧ್ಯಕ್ಷರಾಗಿದ್ದಾರೆ. ಇವೊತ್ತು ಅಜೆಂಡಾ ತಯಾರು ಮಾಡಿ ಅಧ್ಯಕ್ಷರು ಯಾವಾಗ ಮೀಟಿಂಗ್ ಕರೆದರು ಹಾಗೆ ಮೀಟಿಂಗ್ ನಡೆಯುತ್ತಿರುವಾಗ ಅಲ್ಲಿ ಗಲಾಟೆ ಪ್ರಾರಂಭ ಮಾಡಿದೆ. ಒಂದು ಜೀಪ್‌ನಲ್ಲಿ

ಜನತಾದಳದ ಮುಖಂಡರು ಮತ್ತು ಅವರ ಹಿಂದೆ ಮಂತ್ರಿಗಳು ಬರತಕ್ಕಂಥ ಕಾಲದಲ್ಲಿ ಆಕೆ ಅಳುತ್ತಾ ನಮ್ಮ ಕಾರ್ಯಕರ್ತರ ಮುಂದೆ ಬಂದಳು. ನಾನು 'ಕೈ' ಚಿಹ್ನೆಯಿಂದ ಆರಿಸಿ ಬಂದಿದ್ದೇನೆ, ನನಗೆ ಮುರ್ನಾಲ್ಕು ದಿವಸದಿಂದ ಬಲಾತ್ಕಾರವಾಗಿ ಒಂದು ಕಡೆ ಕೋಣೆಯಲ್ಲಿಟ್ಟಿದ್ದಾರೆ, ಈ ರೀತಿಯಾಗಿ ಹೇಳಿ ನಮ್ಮ ಕಾರ್ಯಕರ್ತರ ಪಾದಕ್ಕೆ ಬಿದ್ದು ನಾನು ಕಾಂಗ್ರೆಸ್ ಪಕ್ಷದವರ ಜೊತೆ ಇರುತ್ತೇನೆ ಎಂದು ಆಕೆ ಹೇಳಿದಳು. ಆಗ ಚಿತ್ತಾಪುರದ ಹಿಂದುಳಿದ ವರ್ಗಕ್ಕೆ ಸೇರಿದ ಅಣ್ಣಾರಾವ್ ಎಂಬುವವರನ್ನು ಬಲಾತ್ಕಾರವಾಗಿ ಕರೆದುಕೊಂಡು ಹೋಗುವುದಕ್ಕೆ ಜನತಾದಳದ ನಾಯಕರು ಪ್ರಯತ್ನ ಮಾಡಿದರು, ಅಲ್ಲಿ ಆಗ ಹೊರಗಡೆ ಮತ್ತು ಒಳಗಡೆ ಗಲಾಟೆ ಪ್ರಾರಂಭವಾಯಿತು. ಇದುನಡೆಯುವಾಗ ನಮ್ಮ ಮಂತ್ರಿಗಳೂ ಕೂಡ ಇದ್ದರು, ಜಿಲ್ಲಾ ಮಂತ್ರಿಗಳೂ ಕೂಡ ಇದ್ದರು, ಜಿಲ್ಲಾ ಮಂತ್ರಿಗಳಿಗೆ ನಿಮ್ಮ ಮುಖೇನ ಹೇಳಬಯಸುವುದೇನೆಂದರೆ ಗುಲ್ಬರ್ಗಾ ಜಿಲ್ಲೆಯ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿಯನ್ನು ಅವರು ಹೊತ್ತಿರುತ್ತಾರೆ. Law and order is his responsibility. ಅಲ್ಲಿ ಕೇವಲ ಪಕ್ಷದ ಉಸ್ತುವಾರಿ ಮಂತ್ರಿಯಾಗಿ ಕೆಲಸ ಮಾಡುವುದಲ್ಲ, ಜಿಲ್ಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಸಂರಕ್ಷಣೆ ಮಾಡಬೇಕಾದ ಕೆಲಸವನ್ನು ಅವರು ಮಾಡಬೇಕು. ಆದರೆ ಆವೊತ್ತು ಏಕೆ ಹೀಗೆ ಆಯ್ತೋ ಗೊತ್ತಿಲ್ಲ. ಆವೊತ್ತು 20 ನಿಮಿಷಗಳ ಕಾಲ ಅಧ್ಯಕ್ಷ ಅಲ್ಲಿದ್ದು ಎಲ್ಲಾ ಕಡೆಯಲ್ಲಿಯೂ ಸಮಾಧಾನ ಹೇಳುತ್ತಾನೆ, ಅಲ್ಲಿ ಸದಸ್ಯರಲ್ಲದವರೂ ಕೂಡ ಜಿಲ್ಲಾಪರಿಷತ್ ಸಭಾಂಗಣಕ್ಕೆ ಹೋಗಿ ಗಲಾಟೆ ಮಾಡುತ್ತಿದ್ದಾರೆ, ತಾವೇ ಹೇಳಿ ಅಧ್ಯಕ್ಷರೇ, ಯಾವಾಗ ಕಮಿಟಿಗಳಿದೆ ಚುನಾವಣೆ ನಡೆಸುವುದಕ್ಕೆ ಎಲ್ಲಾ ಸದಸ್ಯರು ಸೇರಿದ್ದಾರೆ, ಆಗ ಅಧ್ಯಕ್ಷರು ಏನು ಮಾಡಬೇಕು. ಅಧ್ಯಕ್ಷರು ಸಭೆಯನ್ನು ಮುಂದಕ್ಕೆ ಹಾಕಿದ್ದಾರೆ, ಆಗ ಪ್ರೆಸಿಂಡೆಂಟ್ ಕೂಡ ಇಲ್ಲ, ವೈಸ್ ಪ್ರೆಸಿಡೆಂಟ್ ಕೂಡ ಇಲ್ಲ. ಅಡ್ಜರ್ನ್ ಮಾಡಿ ಮತ್ತೆ 9ನೇ ತಾರೀಖು ಸಭೆಯನ್ನು ಸೇರಲಾಗುವುದು ಎಂದು ನಿಗಧಿತವಾಗಿ ದಿನಾಂಕವನ್ನು ಕೂಡ ಹೇಳಿ ತದನಂತರ ಅವರು ತಮ್ಮ ಛೇಂಬರ್‌ನಲ್ಲಿ ಹೋಗಿ ಕುಳಿತಿದ್ದಾರೆ. ಆಗ ಮತ್ತೆ ಸಭೆ ನಡೆಯುತ್ತದೆ, ಜಿಲ್ಲಾಪರಿಷತ್ ಚೀಫ್ ಸೆಕ್ರೇಟರಿ ಕಪಿಲ್ ಮೋಹನ್ ಇದ್ದಾರೆ, ನಾನು ಇದರ ಬಗ್ಗೆ ಕಪಿಲ್ ಮೋಹನ್‌ರವರನ್ನು ಕೇಳಿದೆ You are an youngster. What had happened? ಎಂದು ಕೇಳಿದಾಗ ಆಗ ಅವರು ಏನು ಹೇಳಿದರೆಂದರೆ ನನಗೆ ಬಹಳ ಒತ್ತಾಯ ಬಂತು ಎಂದರು. ನಾನು ಕೇಳಿದೆ ಒತ್ತಾಯ ಬಂದಿತು ಎಂದು ಹೇಳಿ ಈಗಾಗಲೇ ಅಡ್ಜೆರ್ನ್ ಮಾಡಿದ ಮೇಲೆ ಮತ್ತೊಮ್ಮೆ ಹೇಗೆ ನೀವುಸಭೆಯನ್ನು ಮಾಡಲಾಗುತ್ತದೆ ಎಂದು ಕೇಳಿದೆ. ಏಕೆಂದರೆ ಅಡ್ಜರ್ನ್ ಮಾಡಿದಾಗ ಒಂದು ನಿಗದಿಯಾದ ದಿನಾಂಕವನ್ನು ಕೂಡ ಹೇಳಿದ್ದರು. ಹೀಗಿದ್ದರೂ ಅಂದು ಮತ್ತೊಬ್ಬರನ್ನು ಅಧ್ಯಕ್ಷ ಪೀಠದಲ್ಲಿ ಕೂಡಿಸಿ ಕಮಿಟಿ ಮಾಡಿದ್ದಾರೆ. ಈ ರೀತಿಯಲ್ಲಿ ಆ ಒಂದು ಮೀಟಿಂಗ್ ಅಂದು ನಡೆದಿದೆ. ನಾನು ಸರ್ಕಾರಕ್ಕೆ ಇಷ್ಟು ಮಾತ್ರ ಕೇಳಬಯಸುತ್ತೇನೆ. ಏನು ನಡೆಯುತ್ತಿದೆ for that we have prepared, prepared ಎಂದು ಹೇಳಿದರೆ ರಾಜಕೀಯವಾಗಿ ನಾವೆಲ್ಲಾ ಕಡೆಗೆ ಅಧ್ಯಕ್ಷರನ್ನು

ಮಾಡೋಣ, ಅದರ ಬಗ್ಗೆ ಪ್ರಸ್ತಾಪ ಮಾಡಬೇಕೆಂದಿಲ್ಲ, ಚುನಾವಣೆ ಬರುತ್ತದೆ, ಆಗ ಜನಾಭಿಪ್ರಾಯ ಅಲ್ಲಿ ಇದ್ದೇ ಇರುತ್ತದೆ. ಇವೊತ್ತು ಜಿಲ್ಲಾಪರಿಷತ್‌ನಲ್ಲಿ ಏನೇನು ದೊಡ್ಡ ದೊಡ್ಡ ಮಾತುಗಳನ್ನು ನಾವು ಹೇಳುತ್ತಿದ್ದೇವೆ, ಇವೊತ್ತಿನ ದಿವಸ ಜನ ಕೂಡ ನೋಡುತ್ತಾರೆ. ಜನ ನೋಡುವಂಥ ರೀತಿಯಲ್ಲಿ ಇಂಥ ಅಸಹ್ಯಕರ ವರ್ತನೆಯಲ್ಲಿ ಜಿಲ್ಲಾ ಪರಿಷತ್‌ನಲ್ಲಿ ಸದಸ್ಯರು ನಡೆದುಕೊಳ್ಳಬಾರದು. ಇವೊತ್ತಿನ ದಿವಸ ಪೋಲಿಸರೂ ಕೂಡ ಸ್ಪೆಕ್ಟೇಟರ್ ಆಗಿದ್ದಾರೆ. ಈಗ ಹೊಸದಾಗಿ ರವೀಂದ್ರನ್ ಎನ್ನುವವರು ಎಸ್.ಪಿ.ಯಾಗಿ ಬಂದಿದ್ದಾರೆ. ನಾನು ಅವರ ಜೊತೆಯಲ್ಲಿ ಮಾತನಾಡಿದ್ದೇನೆ, ಅವರು ತುಂಬಾ ಒಳ್ಳೆಯ ವ್ಯಕ್ತಿ. ಆದರೆ ಅಂದು ಅಲ್ಲಿ ಒಬ್ಬ ಡಿ.ಎಸ್‌ಪಿ. ಸುಮ್ಮನೆ ಕುಳಿತುಕೊಂಡಿದ್ದು ಆದರೂ ಅವರು ಯಾರಿಗೂ ಏನನ್ನೂ ಹೇಳುತ್ತಿರಲಿಲ್ಲ. ಈ ರೀತಿಯಲ್ಲಿ ಇವೊತ್ತಿನ ದಿವಸ ಪೋಲಿಸರು ಮತ್ತು ಅಧಿಕಾರಿಗಳು ಬಹಳ ಅಸಹಾಯಕರಾಗಿದ್ದಾರೆ. ಏನು ನಡವಳಿಕೆ ಗುಲ್ಬರ್ಗಾ ಜಿಲ್ಲಾಪರಿಷತ್‌ನಲ್ಲಿ ನಡೆಯುತ್ತಿದೆ ಇದರ ಬಗ್ಗೆ ಯಾರೂ ಹೇಳುವವರು ಮತ್ತು ಕೇಳುವವರು ಇಲ್ಲವೆಂಬ ಅಭಿಪ್ರಾಯ ಜನರ ಮನಸ್ಸಿನಲ್ಲಿ ಬರುತ್ತಿದೆ. ಅದಕ್ಕೋಸ್ಕರ ತಮ್ಮ ಗಮನಕ್ಕೆ ತರುತ್ತಿದ್ದೇವೆ, ಸಾಕಷ್ಟು ವಿಷಯಗಳೂ ಕೂಡ ಇದರಲ್ಲಿದೆ. ಇದರ ಬಗ್ಗೆ ಪ್ರಸ್ತಾಪ ಮಾಡಬೇಕಾದ ಅವಶ್ಯಕತೆ ಇದೆಯಾದ ಕಾರಣ ತಾವು ಸಮಯವನ್ನು ಕೊಟ್ಟರೆ ಬಹಳ ವಿಸ್ತಾರವಾಗಿ ಹೇಳಬಹುದು. ಇವೊತ್ತಿನ ದಿವಸ ಗುಲ್ಬರ್ಗಾ ಜಿಲ್ಲಾಪಂಚಾಯತ್‌ನಲ್ಲಿ ಏನೇನು ನಡೆಯುತ್ತಿದೆ ಮತ್ತು ಈಗಾಗಲೇ ಖರ್ಗೆಯವರು ಹೇಳಿದ ಹಾಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಕೂಡ ಪೋಲೀಸರ ವರ್ತನೆ ಮತ್ತು ಅಧಿಕಾರಿಗಳ ವರ್ತನೆ ಹೇಗೆ ನಡೆಯುತ್ತಿದೆ ಎಂದು ಗೊತ್ತಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಇವೊತ್ತಿನ ದಿವಸ ಬರೇ ಭಾಷಣಗಳನ್ನು ಮಾಡಿದರೆ ಸಾಲದು, ಕಡೆಪಕ್ಷ ನಮಗೆ ಕಮಿಟ್‌ಮೆಂಟ್ ಇರಬೇಕು. ದೇವರಾಜ ಅರಸುರವರೂ ಕೂಡ 8 ವರ್ಷಗಳ ಕಾಲ ಈ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದಾರೆ, ನಾನೂ ಕೂಡ 25 ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಆದರೆ ಈಗ ನಡೆದಿರುವ ಬಿಹೇವಿಯರ್‌ನ್ನು ಜನರು ಸಹಿಸುವುದಿಲ್ಲ. ಇದನ್ನು ಖಂಡಿಸಲೇಬೇಕಾಗಿದೆ. ಅಂದು ಅಧ್ಯಕ್ಷರು ಸಭೆಯನ್ನು ನಿಗದಿತ ದಿನಾಂಕವನ್ನು ಹೇಳಿ ಮುಕ್ತಾಯ ಮಾಡಿದ ಮೇಲೂ ಕೂಡ ಅದೇ ಸಭೆಯಲ್ಲಿ ಮತ್ತೊಬ್ಬರನ್ನು ಅಧ್ಯಕ್ಷ ಪೀಠದಲ್ಲಿ ಕೂಡಿಸಿ ಸಭೆಯನ್ನು ನಡೆಸಿರುವ ವರ್ತನೆ ಏನಿದೆ ಅದು ಸರಿಯಲ್ಲ. ಮಂತ್ರಿಗಳೂ ಕೂಡ they are forgetting that they are Government ಅದನ್ನು ಮರೆತಿದ್ದಾರೆ. ನಿಮಗೆಲ್ಲರಿಗೂ ಪಿ.ಶಿವಣ್ಣನವರು ಏನು ಹಿಂದೆ ಇದ್ದರು ಅವರಿಗೆ ಗೊತ್ತಿರಬಹುದು, ಹಿಂದೆ ಮುಖ್ಯಮಂತ್ರಿಯಾಗಿದ್ದ ದೇವರಾಜ್ ಅರಸ್‌ರವರು ಪಿ.ಶಿವಣ್ಣನವರಿಗೆ ಇವೊತ್ತು ಫೀಸ್ ಮಾಫ್ ಮಾಡಿಬಿಡಿ ಎಂದರು. ಪಿ.ಶಿವಣ್ಣನವರು ಆಗಲೇ ಆರ್ಡರ್ ಮಾಡಿದರು. ಆರ್ಡರ್ ಮಾಡಿದ ಮೇಲೆ ದೇವರಾಜ ಅರಸುರವರು ಕೇಳಿದರು, ನೋಡಪ್ಪಾ, ಯುಆರ್‌ಎ ಗೌವರ್ನ್‌ಮೆಂಟ್ ನೀವು ಹೇಗೆ ಮಾಡಿದಿರಿ ಎಂದಾಗ ವಿತ್ ಆಲ್ ದಟ್ ಅದಕ್ಕೆ ಮನ್ನಣೆ ಕೊಟ್ಟು ಏನು ಆರ್ಡರ್ ಮಾಡಿದ್ದಾರೆ ಅಲ್ಲಿ ಅದಕ್ಕೆ,

ದೇವರಾಜ ಅರಸುರವರು ಕರ್ನಾಟಕದ ಮುಖ್ಯಮಂತ್ರಿ ಆದ ಹಾಗೆ ಇವ್ರೊತ್ತು He is also a part and parcel of the Government ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನನಗೆ ಅನ್ನಿಸುತ್ತದೆ, They are my friends. But they must know their responsibility. ಈ ರೀತಿಯ ವರ್ತನೆಗೆ ಮತ್ತು ಈ ರೀತಿಯ ಪ್ರೊಸೀಡಿಂಗ್ಸ್ ನಡೆದಿರುವ ಬಗ್ಗೆ ಜನರು ಹೊರಗಡೆ ಮಾತನಾಡಿಕೊಳ್ಳುತ್ತಿದ್ದಾರೆ. ಆದುದರಿಂದ ಇದರ ಬಗ್ಗೆ ವಿಸ್ತಾರವಾದ ಚರ್ಚೆ ಆಗಬೇಕಾಗಿರುವುದರಿಂದ ಈಗಾಗಲೇ ವಿರೋಧ ಪಕ್ಷದ ನಾಯಕರು ಹೇಳಿರುವಂತೆ ನಿಲುವಳಿ ಸೂಚನೆಯ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ಕಾಗೋಡು ತಿಮ್ಮಪ್ಪ (ಸಾಗರ): ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಧರ್ಮಸಿಂಗ್‌ರವರು ಬಹಳ ವಿಸ್ತಾರವಾಗಿ ಹೇಳಿದ್ದಾರೆ. ಇದರಲ್ಲಿ ಮುಖ್ಯವಾಗಿ ಹಲವಾರು ವಿಚಾರಗಳನ್ನು ಹೇಳಬೇಕಾಗಿರುವುದರಿಂದ ಚರ್ಚೆಗೆ ಅವಕಾಶ ಮಾಡಿಕೊಡಬೇಕಾದ ಅನಿವಾರ್ಯತೆ ಇದೆಯೆಂಬುದನ್ನು ತಮಗೆ ಮನವರಿಕೆ ಮಾಡಿಕೊಡುವುದೇ ಈ ಹಂತದ ಚರ್ಚೆಯಾಗಿದೆ. ಇಲ್ಲಿ ದಿನಾಂಕ 16-8-97ರಂದು ಒಂದು ನೋಟಿಸ್ ಕೊಟ್ಟು ಅದರಲ್ಲಿ ದಿನಾಂಕ 23-8-97ರಂದು ಮೀಟಿಂಗ್ ಸೇರುವ ಬಗ್ಗೆ ತಿಳಿಸಲಾಗಿದೆ. ಅದರಲ್ಲಿ ಹೀಗಿದೆ, ಉಲ್ಲೇಖ (1)ರ ಪ್ರಕಾರ ಜಿಲ್ಲಾ ಪಂಚಾಯತಿಯ ವಿವಿಧ ಸ್ಥಾಯೀ ಸಮಿತಿಗಳಿಗೆ ಸದಸ್ಯರನ್ನು ಚುನಾಯಿಸಲು ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು. ಉಲ್ಲೇಖ (3)ರ ಪ್ರಕಾರ ಸ್ಥಾಯೀ ಸಮಿತಿಗಳ ರಚನೆಯನ್ನು ಕಳೆದ ಸಲದಂತೆ ನಡೆಸಿಕೊಡಲು ದಿನಾಂಕ 27-8-97ರ ಸಭೆಯಲ್ಲಿ ಚರ್ಚಿಸಿ ಜಿಲ್ಲಾ ಪಂಚಾಯತ್ ಅಧ್ಯಕ್ಷರ ಅಧ್ಯಕ್ಷತೆಯಲ್ಲಿಯೇ ತೀರ್ಮಾನ ತೆಗೆದುಕೊಳ್ಳತಕ್ಕದ್ದು. ವಿಶೇಷ ಸಭೆ ಸ್ಥಾಯಿ ಸಮಿತಿಗಳ ರಚನೆ ಮಾಡಲು ಮಾತ್ರ ಕರೆಯಲಾಗುವುದು ಎಂದು ಸೂಚಿಸಲಾಗಿದೆ. ಇದು ಕೊಟ್ಟಿರತಕ್ಕ ಸಭೆಯ ತಿಳುವಳಿಕೆ ನೋಟೀಸ್. ಈ ಸ್ಥಾಯಿ ಸಮಿತಿಗಳ ರಚನೆ ಚುನಾಯಿತ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮಾಡಬೇಕಾದ ಕೆಲಸ. ಈ ಕೆಲಸವಾಗಿಲ್ಲ, ಅದಕ್ಕಿಂತ ಮುಂದೆ ಹೋಗಿ ಅಧ್ಯಕ್ಷರು ಸಭೆಯಿಂದ ತಮ್ಮ ಕೊಠಡಿಗೆ ಹೋದಂತಹ ಸಂದರ್ಭದಲ್ಲಿ ಅಧ್ಯಕ್ಷರ ಮನ ಒಲಿಸಿ ಪುನಃ ಸಭೆ ಸೇರಿ ಚುನಾವಣೆ ಮಾಡಲು ಪ್ರಯತ್ನವನ್ನು ಅಲ್ಲಿರತಕ್ಕ ಮಂತ್ರಿಗಳು ಮಾಡಬೇಕಾಗಿತ್ತೇ ವಿನಃ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ತಮ್ಮ ಕೊಠಡಿಯಲ್ಲಿ ಇರುವಂತಹ ಸಂದರ್ಭದಲ್ಲಿ ಅಲ್ಲಿ ಸಭೆಯಲ್ಲಿ ಇರತಕ್ಕಂಥಹ ಸದಸ್ಯರನ್ನು ಸೇರಿಸಿಕೊಂಡು, ಅದರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿ, ಸಭೆ ನಡೆಸಿ ತೀರ್ಮಾನಗಳನ್ನು ಕೈಗೊಳ್ಳತಕ್ಕಂಥದ್ದು ಅಕ್ರಮ ಮತ್ತು ಕಾನೂನು ಬಾಹಿರವಾದ ಕೆಲಸ. ಅದು ಅಲ್ಲದೆ ಅಲ್ಲಿ ಇಬ್ಬರು ಮಂತ್ರಿಗಳು ಇರುವಂತಹ ಸಂದರ್ಭದಲ್ಲಿ ಇದು ನಡೆದಿದೆ ಎಂದು ಹೇಳುವಾಗ ಇದು ಪ್ರಾಮುಖ್ಯವಾದಂತಹ

ವಿಷಯ ಎನ್ನುವುದನ್ನು ನಾವು ಚರ್ಚೆ ಮಾಡಿ ಹೇಳುವ ಅವಶ್ಯಕತೆ ಇಲ್ಲ, ಇದು ಸಾರ್ವಜನಿಕ ಪ್ರಾಮುಖ್ಯವಾದ ವಿಷಯ ಆದ್ದರಿಂದ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ್: ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆಯಲ್ಲಿ...

ಶ್ರೀ ಆರ್.ಧರ್ಮಸಿಂಗ್: ಸರ್ಕಾರದ ಹತ್ತಿರ ಏನು ವರದಿ ಬಂದಿದೆ, ಅವರು ಇದ್ದಾರೆ ಅವರೆ ಹೇಳಲಿ.

ಶ್ರೀ ಶರಣಬಸಪ್ಪ ದರ್ಶನಾಪುರ: ಮಾನ್ಯ ಅಧ್ಯಕ್ಷರೆ, ಇಲ್ಲಿ ನನ್ನ ಹೆಸರನ್ನು ಸೂಚಿಸಿರುವುದರಿಂದ ಇದರ ಬಗ್ಗೆ ನಾನು ಹೇಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಮ್ಮ ಅಲಿಗೇಷನ್ ನೇರವಾಗಿದೆ. He is one of the parties for that incident. Therefore, you can tell us.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ: ನಿಜ ಸಂಗತಿಯನ್ನು ಯಾರೂ ಕದಿಯಲು ಆಗುವುದಿಲ್ಲ. ಅಲ್ಲಿ ಏನು ನಡೆದಿದೆ ಅದನ್ನು ಮುಚ್ಚು-ಮರೆ ಮಾಡಲು ಆಗುವುದಿಲ್ಲ. ಅವರು ಹೇಳುವುದು ಸರ್ಕಾರದ್ದು ಏನ್ನುವುದಾದರೆ ಬೇರೆ ಮಾತು. ಸರ್ಕಾರ ಅಲ್ಲಿ ನಡೆದಂಥ ಘಟನೆ ವಿಷಯಗಳನ್ನು ಸಭೆ ಮುಂದೆ ಇಡತಕ್ಕ ಸಂದರ್ಭದಲ್ಲಿ ನೀವು ಹೇಳುವುದಕ್ಕೆ ಅವರು ಹೇಳುವುದಕ್ಕೂ ವ್ಯತ್ಯಾಸ ಬಂದರೆ?

ಅಧ್ಯಕ್ಷರು: ನಾನು ಏನು ಹೇಳುತ್ತೇನೆ. ಸನ್ಮಾನ್ಯ ಶರಣಬಸಪ್ಪ ದರ್ಶನಾಪುರ ಅವರು ಆ ಜಿಲ್ಲೆಯಿಂದ ಬಂದತಹ ಸಚಿವಸಂಪುಟದ ಸದಸ್ಯರಲ್ಲಿ ಆಗಿದ್ದಾರೆ. ಆ ಸಭೆಯಲ್ಲಿ ಅವರು ಸಹ ಹಾಜರು ಇದ್ದವರು. ಅವರು ಅಲ್ಲಿ ಏನು ನಡೆಯಿತು ಅದನ್ನು ಗಮನಿಸಿದ್ದಾರೆ ಅದನ್ನು ಅವರು ಹೇಳುತ್ತಾರೆ. ಅವರು ಮೊದಲು ಹೇಳಲಿ ಇಂಥ ಒಂದು ಸನ್ನಿವೇಶದಲ್ಲಿ, ಇಂಥ ಒಂದು ಘಟನೆ ನಡೆದಾಗ ಸರ್ಕಾರದ ನಿಲವು ಏನು, ಸರ್ಕಾರ ತಾನು ಏನು ಕ್ರಮ ತೆಗೆದುಕೊಂಡಿದೆ, ಸರ್ಕಾರಕ್ಕೆ ಏನು ವರದಿ ಬಂದಿದೆ ಎಲ್ಲವನ್ನೂ ಮಾನ್ಯ ಉಪ ಮುಖ್ಯಮಂತ್ರಿಗಳಿಂದ ನಾನು ಹೇಳಿಸುತ್ತೇನೆ. Since he is in the HOuse and since he was the Member present in the said meeting, I would like to hear him.

+ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, 23ನೇ ತಾರೀಖಿನಂದು ಗುಲ್ಬರ್ಗಾ ಜಿಲ್ಲಾ ಪಂಚಾಯತ್‌ನಲ್ಲಿ ನಡೆದಿರತಕ್ಕ ಸ್ಥಾಯಿ

ಸಮಿತಿ ಚುನಾವಣೆ ಬಗ್ಗೆ ಈಗಾಗಲೇ ವಿರೋಧ ಪಕ್ಷದ ನಾಯಕರು ಮತ್ತು ಹಿರಿಯರಾದ ಶ್ರೀ ಖರ್ಗೆಯವರು, ಶ್ರೀ ಧರ್ಮಸಿಂಗ್, ಶ್ರೀ ಕಾಗೋಡ ತಿಮ್ಮಪ್ಪನವರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಚುನಾವಣೆ ಅಧ್ಯಕ್ಷರು ಇಲ್ಲದೆ ನಡೆದಿರುವುದು ನಿಜ. ಆದರೆ ಮಿಕ್ಕಿದ್ದು ಅವರು ಏನು ಹೇಳಿದ್ದಾರೆ ಅದರ ಬಗ್ಗೆ ನಾನು ಹೇಳುತ್ತೇನೆ ಏಕೆಂದರೆ ನಾನೂ ಒಬ್ಬ ಅಲ್ಲಿ ಜಿಲ್ಲಾಪಂಚಾಯತ್ ಸದಸ್ಯನಾಗಿ ಸಭೆಯಲ್ಲಿ ಹಾಜರಾಗಿದ್ದೆ. ತಮಗೆ ಅಲ್ಲಿ ನಡೆದಿರುವ ವಿಷಯದ ಬಗ್ಗೆ ಹೇಳುತ್ತೇನೆ. 19ನೇ ತಾರೀಖಿಗೆ ಜನರಲ್ ಬಾಡಿ ಮೀಟಿಂಗ್ ನಡೆಸಲಾಯಿತು. ಆ ಮೀಟಿಂಗ್‌ನಲ್ಲಿ 23ನೇ ತಾರೀಖಿನಂದು ಸ್ಥಾಯಿ ಸಮಿತಿಗೆ ಸ್ಪೆಷಲ್ ಮೀಟಿಂಗ್ ಕರೆಯಬೇಕೆಂದು ತೀರ್ಮಾನವಾಯಿತು. ಆ ಮೀಟಿಂಗ್‌ನಲ್ಲಿ ಆಗಿರತಕ್ಕ ವಿಷಯದ ಬಗ್ಗೆ ಪ್ರೊಸೀಡಿಂಗ್ಸ್ ಕೂಡ ಇದೆ. ಅದರ ಅಧ್ಯಕ್ಷತೆಯನ್ನು ಚೀಫ್ ಎಕ್ಸಿಕ್ಯೂಟೀವ್ ಆಫೀಸ್ಸರಗೆ ಕೊಡಲಾಗಿದೆ. ಆದರೆ ಎರಡು ದಿನಗಳ ನಂತರ ಆ ಪ್ರೊಸೀಡಿಂಗ್ಸ್ ಸೈನ್ ಆಗಿ ಬರುವುದು ಇತ್ತು. ಆಗ ಆ ಜಿಲ್ಲಾ ಪಂಚಾಯತ್ ನಲ್ಲಿರತಕ್ಕ ಪಕ್ಷದವರಿಗೆ ಸ್ಪಷ್ಟವಾಗಿ ಅರಿವಾಯಿತು ಅವರಲ್ಲಿ ಮೆಜಾರಿಟಿ ಇಲ್ಲ ಎಂದು ಅದರಲ್ಲಿ ಒಂದು ತಿದ್ದುಪಡಿಯನ್ನು ಕೂಡ ಮಾಡಲಾಗಿದೆ. ಅದರಲ್ಲಿ ಇರತಕ್ಕ ಒಂದು ವ್ಯಾಕ್ಯವನ್ನು ಕಾಟ್ ಹೊಡೆದಿದ್ದಾರೆ. ಅಧ್ಯಕ್ಷರ ಅಪ್ಪಣೆ ಮೇರೆಗೆ ಚುನಾವಣೆಯನ್ನು ಮಾಡಬೇಕು ಎಂದು ಆದೇಶ ಮಾಡಿದ್ದಾರೆ. ಅದನ್ನು ತಾವು ಆರಿಸಿ ನೋಡಿದರೆ ಅದರಲ್ಲಿ ಕಾಟ್ ಹೊಡೆದದ್ದು ಸ್ಪಷ್ಟವಾಗಿ ಕಾಣುತ್ತದೆ. ಆಮೇಲೆ ನಾವು ಮತ್ತು ಮಾಲಿಕಯ್ಯ ಗುತ್ತೇದಾರರು 22ನೇ ತಾರೀಖು ಸಾಯಂಕಾಲ ಗುಲ್ಬರ್ಗಾಕ್ಕೆ ಬಂದಿದ್ದೆವು. ಏಕೆಂದರೆ 22ನೇ ತಾರೀಖು ಬೆಳಿಗ್ಗೆ ಶಹಾಪುರದಲ್ಲಿ ಗಲಭೆಯಾಗಿದ್ದನ್ನು ನೋಡಿಕೊಂಡು 22ನೇ ತಾರೀಖು ಸಾಯಂಕಾಲ ನಾವು ಗುಲ್ಬರ್ಗಾಕ್ಕೆ ಹೋದೆವು. ಅಲ್ಲಿಗೆ ಹೋದಾಗ ನಮ್ಮ ಪಕ್ಷದ ಸದಸ್ಯರೆಲ್ಲರೂ ಬಹಳ ಆತಂಕದಿಂದ ಇದ್ದರು, ಹೋದ ಸಾರಿ ಜಿಲ್ಲಾ ಪಂಚಾಯತಿಯಲ್ಲಿ ಒಂದು ಗೊಂದಲದ ವಾತಾವರಣ ಇತ್ತು. ಈ ಸಾರಿಯೂ ಈ ಆಳತಕ್ಕಂತಹ ಪಕ್ಷ ನಮಗೆ ಒಳಗೆ ಬರಗೊಡುತ್ತಿಲ್ಲ. ಈ ಚುನಾವಣೆಯನ್ನು ನಡೆಯಲು ಬಿಡುವುದಿಲ್ಲ ಎನ್ನುವ ಭಯದ ವಾತಾವರಣ ಇತ್ತು. ಅವಾಗ್ಗೆ ನಾವು ಅಲ್ಲಿಯ ಎಸ್.ಪಿ.ಯವರನ್ನು ಕಂಡು ಈ ವಿಷಯವನ್ನು ಹೇಳಿದ್ದೆವು. ಅದಕ್ಕೆ ಅವರು ಚೀಫ್ ಸೆಕ್ರೆಟರಿಯವರು ನಮಗೆ ಈಗಾಗಲೇ ಈ ವಿಷಯವನ್ನು ತಿಳಿಸಿದ್ದಾರೆ ಏನೂ ಗಲಭೆ ಆಗದಂತೆ ನೋಡಿಕೊಳ್ಳುತ್ತೇವೆಂದು ಹೇಳಿದರು. ಆಗ ಸುಮಾರು 11 ಗಂಟೆಗೆ 15ನಿಮಿಷ ಕಡಿಮೆ ಇತ್ತು ನಾವು ಎಲ್ಲಾ ಜಿಲ್ಲಾಪಂಚಾಯತ್ ಸದಸ್ಯರು ಅದರಲ್ಲಿ ಜನತಾದಳದವರು ಮತ್ತು ಬಿಜೆಪಿಯವರು, ಕಮ್ಯುನಿಷ್ಟ್ ಪಕ್ಷದವರು, ಇದಕ್ಕಿಂತ ಮುಂಚೆ ಜಿಲ್ಲಾಪಂಚಾಯತ್ ಅಧ್ಯಕ್ಷರ ಚುನಾವಣೆ ಸಂದರ್ಭದಲ್ಲಿಯ ಎರಡು ಪ್ರಸಂಗಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಜಿಲ್ಲಾ ಪಂಚಾಯತ್ ಅಧ್ಯಕ್ಷರ ಚುನಾವಣೆ ನಡೆಯುವಾಗ ನಮ್ಮ ಜನತಾದಳದ 10 ಜನ ಸದಸ್ಯರುಗಳ ನಮ್ಮ ಪಕ್ಷವನ್ನು ಬಿಟ್ಟು, ಕಾಂಗ್ರೆಸ್ ಮತ್ತು ಕಮ್ಯುನಿಷ್ಟ್ ಪಕ್ಷದವರ ಸಹಕಾರದಿಂದ ಅಧ್ಯಕ್ಷರ ಸ್ಥಾನವನ್ನು ಗೆದ್ದುಕೊಂಡರು, ಆದರೆ ಮೊನ್ನೆ ನಡೆದಂಥ ಸ್ಥಾಯಿ

ಸಮಿತಿ ಚುನಾವಣೆಯಲ್ಲಿ ಕಮುನಿಷ್ಟ್ ಪಕ್ಷದ ಮತ್ತು ಬಿಜೆಪಿಯ ಸದಸ್ಯರು ಇಬ್ಬರು ನಮ್ಮ ಜೊತೆ ಸೇರಿ ಸ್ಥಾಯಿ ಸಮಿತಿಯ ಚುನಾವಣೆ ಮಾಡೋಣ ಎಂದು ಅವರು ಹೇಳಿದರು. ನಾವು ಎಲ್ಲರೂ ಒಟ್ಟಿಗೆ ಸೇರಿ 11 ಗಂಟೆಗೆ 10 ನಿಮಿಷ ಕಡಿಮೆ ಇದ್ದಾಗ ನಾವು ಸಭಾಂಗಣವನ್ನು ಪ್ರವೇಶಿಸಿದ್ದೆವು. ನಾವೆಲ್ಲ ಒಟ್ಟಿಗೆ ಒಳಗಡೆ ಹೋಗಿ ಕುಳಿತೆವು. ನಮ್ಮ ಪಕ್ಷದ ಎಲ್ಲಾ ಸದಸ್ಯರೂಕೂಡ ಒಳಗಡೆ ಬಂದರು ಸುಮಾರು, 11 ಗಂಟೆಯಾಗಿ 10 ನಿಮಿಷ ಆದ್ದಾಗೂ ಕೂಡ ಅಧ್ಯಕ್ಷರು ಬರಲಿಲ್ಲ, ಆಮೇಲೆ ಚುನಾವಣೆಯು ನಡೆಯಲಿಲ್ಲ, ಸುಮಾರು 11 ಗಂಟೆ 15 ನಿಮಿಷಯಕ್ಕೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಬಂದರು, ನೀವು ಒಬ್ಬರೇ ಬಂದಿದ್ದೀರಿ, ನಿಮ್ಮ ಪಕ್ಷದ ಸದಸ್ಯರನ್ನು ಮನವಲಿಸಿ ಕರೆದುಕೊಂಡು ಬನ್ನಿ ಚುನಾವಣೆ ನಡೆಸೋಣ ಎಂದು ನಾವು ಹೇಳಿದ್ದೆವು. ಇದಕ್ಕಿಂತ ಮುಂಚಿತವಾಗಿ ಇಲ್ಲಿ ಇದ್ದಂತಹ ಅಧ್ಯಕ್ಷರು ಮತ್ತು ಕೆಲವೊಂದು ಸದಸ್ಯರು ನಮ್ಮ ಜಿಲ್ಲಾ ಪಂಚಾಯತ್ ಸದಸ್ಯರ ಜೊತೆ ಮಾತನಾಡಿ, ತಾವು ಎರಡು ಅಧ್ಯಕ್ಷರ ಸ್ಥಾನವನ್ನು ತೆಗೆದುಕೊಳ್ಳಿ ನಮಗೆ ಕೇವಲ ಮೆಂಬರ್ ಕೊಟ್ಟರೆ ಸಾಕು ಎಂದು ಅವರು ಹೇಳಿದ್ದರು. ಆದರೆ ನಮ್ಮ ಪಕ್ಷ ಬಿಟ್ಟುಹೋದ 3 ಜನ ಸದಸ್ಯರು ತಿರುಗಿ ನಮ್ಮ ಪಕ್ಷಕ್ಕೆ ಬಂದಿದ್ದರಿಂದ ನಾವು ಒಪ್ಪಲಿಲ್ಲ. ಹೋದ ಅಧ್ಯಕ್ಷರ ಚುನಾವಣೆಯಲ್ಲಿ 26 ಮತಗಳು ನಮಗೆ ಬಿದ್ದಿದ್ದವು, ಆಳತಕ್ಕ ಪಕ್ಷದವರಿಗೆ 28 ಮತಗಳು ಬಿದ್ದಿದ್ದವು, ಕೇವಲ 2 ಮತಗಳ ಅಂತರ ಇತ್ತು. ಹೋದ ಸದಸ್ಯರು ತಿರುಗಿ ಬಂದಿದ್ದರಿಂದ ನಮಗೇ ಮೆಜಾರಿಟಿ ಆಯಿತು. ಆದ್ದರಿಂದ ಅವರು ಹೇಳಿದಕ್ಕೆ ನಾವು ಒಪ್ಪದೆ ಚುನಾವಣೆ ಮಾಡಿ ಅದನ್ನು ನಾವು ಎದುರಿಸುತ್ತೇವೆಂದು ನಮ್ಮ ಹತ್ತಿರ ಮೆಜಾರಿಟಿ ಇದೆ ಎಂದು ಹೇಳಿದ್ದೆವು. ನಮಗೆ 22ನೇ ತಾರೀಖಿಗೆ ಗೊತ್ತಾಯಿತು ನಾಳೆ ಚುನಾವಣೆ ನಡೆಯುವುದಿಲ್ಲ ಎಂದು ಆದರೂ ನಾವು ಬಂದಿದ್ದೆವು. ಆಕ್ಟ್ ಕೂಡ ನೋಡಿದ್ದೆವು. 11-15ಕ್ಕೆ ಅಧ್ಯಕ್ಷರು ಬಂದು ಇಲ್ಲಿ ಯಾವ ಸದಸ್ಯರಿಗೆ ರಕ್ಷಣೆ ಇಲ್ಲ ಆದ್ದರಿಂದ ಸಭೆಯನ್ನು ಮುಂದಕ್ಕೆ ಹಾಕುತ್ತೇವೆಂದು ಹೇಳಿ ಸಭೆಯನ್ನು ಮುಂದಕ್ಕೆ ಹಾಕಿದ್ದರು. ಆಗ ಚೀಫ್ ಸೆಕ್ರೆಟರಿ ಕೂಡ ಎದ್ದು ಹೋಗಲು ಪ್ರಯತ್ನ ಮಾಡಿದ್ದರು, ಆಗ ನಾವು ಅವರಿಗೆ ಒಂದು ಮಾತನ್ನು ಕೇಳಿದ್ದೆವು; ಈ ಸಭೆಯನ್ನು ಮುಂದಕ್ಕೆ ಹಾಕಲು ಅಧ್ಯಕ್ಷರಿಗೆ ಏನು ಅಧಿಕಾರ ಎಂದು ತಿಳಿಸಿ, ಆಮೇಲೆ ಬೇಕಾದರೆ ಸಭೆ ಮುಂದಕ್ಕೆ ಹಾಕಿ ಎಂದು ಹೇಳಿದೆವು ಮುಂದೆ ಬಂದಾಗ ಕೂಡ ನಮ್ಮದೇ ಮೆಜಾರಿಟಿ ಇರುತ್ತದೆ ನಾವು ಗದ್ದಲ ಮಾಡುವ ಜರೂರತ್ ಕೂಡಇಲ್ಲ ಎಂದುಹೇಳಿದೆವು ಇದಕ್ಕಿಂತ ಮೊದಲು ಕೆಲವು ಕಾಂಗ್ರೆಸ್ ಸದಸ್ಯರು ಗೊಂದಲ ಮಾಡಲು ಪ್ರಯತ್ನಪಟ್ಟರು. ಈಗಾಗಲೇ ಹಿರಿಯ ಸದಸ್ಯರು ಹೇಳಿದಹಾಗೆ, ಕಾಂಗ್ರೆಸ್ಸಿನ ಇಬ್ಬರು ಸದಸ್ಯರಾದ ಜನ್ನತ್ ಬಿ ಮತ್ತು ಅಣ್ಣಾರಾವ್ ಕೂಡ ನಮಗೆ ಬೆಂಬಲ ನೀಡುತ್ತೇವೆಂದರು, ಆದರೆ ಗದ್ದಲ ಮಾಡಿ ಅವರನ್ನು ಹೆದರಿಸಿ ಕರೆದುಕೊಂಡು ಹೋದರು. ನಂತರ ಚೀಫ್ ಸೆಕ್ರೇಟರಿಯವರು ನಮಗೆ 10 ನಿಮಿಷ ಟೈಮ್ ಕೊಡಿ ನಾವು ಅಧಿಕಾರಿಗಳ ಜೊತೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಆಗ ನಾವು ಕುಳಿತ ಕುರ್ಚಿ ಬಿಟ್ಟು ಏಳಲಿಲ್ಲ. ಮಾನ್ಯ ಶ್ರೀ ಖರ್ಗೆಯವರು ಹೇಳುತ್ತಾರೆ, ನಾವು ಚೀಫ್ ಸೆಕ್ರೆಟರಿಯವರ

ಕೈಹಿಡಿದೆವು ಎಂದು, ಒಂದು ವೇಳೆ ಅವರ ಕೈಹಿಡಿದಿದ್ದರೆ ಈ ಜಾಗದಲ್ಲಿ ಇರಲು ನಾವು ಯೋಗ್ಯರು ಅಲ್ಲ ಎಂದು ತಮ್ಮ ಮುಖಾಂತರ ಸದಸ್ಯರಿಗೆ ತಿಳಿಸಬಯಸುತ್ತೇನೆ. 10 ನಿಮಿಷದ ನಂತರ ಚೀಫ್ ಸೆಕ್ರೆಟರಿಯವರು ಬಂದು, 192 (2)ರ ಒಂದು ರೂಲಿಂಗ್, ಮತ್ತು 186 (2)ರ ಒಂದು ರೂಲಿಂಗ್ ಓದಿ ಚುನಾವಣೆ ನಡೆಸಬೇಕು ಎಂದರು, ಏಕೆಂದರೆ ಕೋರಂ ಇತ್ತು ಸುಮಾರು 30 ಜನ ಜಿಲ್ಲಾಪಂಚಾಯತ್ ಸದಸ್ಯರು, 52 ಮಂದಿ ಸದಸ್ಯರಲ್ಲಿ 30 ಜನ ತಾವು ಇರುತ್ತೀರಿ ಆದ್ದರಿಂದ ಚುನಾವಣೆಯನ್ನು ನಡೆಸಬಹುದು ಎಂದು ಆದೇಶ ಕೊಟ್ಟಾಗ, ಯಡಿಗ್‌ಮದರಿ ತಿಮ್ಮಣ್ಣನವರನ್ನು ನಾವು ಅಧ್ಯಕ್ಷರನ್ನಾಗಿ ಮಾಡಿ ಚುನಾವಣೆ ನಡೆಸಿದೆವು. 3-4 ವೀಡಿಯೋ ರೆಕಾರ್ಡಿಂಗ್ ಕೂಡ ಇವೆ. ತಾವು ಅದರಲ್ಲಿ ಸ್ಪಷ್ಟವಾಗಿ ನೋಡಬಹುದು, ಒಳಗೆ ಯಾವ ಗದ್ದಲವೂ ಆಗಿಲ್ಲ. ಆ ವೀಡಿಯೋ ಕ್ಯಾಸೆಟನ್ನು ತಾವು ವೀಕ್ಷಿಸಿದರೆ ಗೊತ್ತಾಗುತ್ತದೆ. ಈ ಚುನಾವಣೆಯಲ್ಲಿ ಮಾಲೀಕಯ್ಯ ಆಗಲೀ, ನಾವಾಗಲೀ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿಲ್ಲ ಎಂದು ಹೇಳಿ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅವರ ಗಮನಕ್ಕೆ ನಡೆದಂಥ ವಿವರಗಳನ್ನು ತಂದು ಕೊಡುತ್ತೇನೆ. ಈಗಾಗಲೇ ಮುಖ್ಯ ಕಾರ್ಯದರ್ಶಿಯವರು ರೂಲಿಂಗ್ ಕೊಟ್ಟಿದ್ದಾರೆ. ಈ ಆಕ್ಟ್ ಪ್ರಕಾರ ಕೋರಂ ಇದ್ದು ಚುನಾವಣೆ ಮಾಡಬಹುದು ಎಂದಾಗ ನಾವು ಚುನಾವಣೆಯನ್ನು ಮಾಡಿದ್ದೇವೆ.

ಶ್ರೀ ಆರ್.ಧರ್ಮಸಿಂಗ್: ಈ ಸ್ಪಷ್ಟೀಕರಣ ಇವೊತ್ತು ಸಭೆಗೆ ಬೇಕಾಗಿರಲಿಲ್ಲ. ನಾವು ಕೇಳತಕ್ಕಂಥದ್ದು ಇಷ್ಟೆ. ಅಡ್ಜರ್ನ್ ಮೀಟಿಂಗ್‌ಗೆ ಸಭೆ ನಡೆಸಬಹುದೇ ಇಲ್ಲವೇ? ಅಡ್ಜರ್ನ್ ಮೀಟಿಂಗ್ ಆದಮೇಲೆ ಅಲ್ಲಿ ಮೆಜಾರಿಟಿ ಇದೆ ಎನ್ನತಕ್ಕಂಥ ಪ್ರಶ್ನೆಯೇ ಬರುವುದಿಲ್ಲ. still he is the President, ಪ್ರೆಸಿಡೆಂಟರನ್ನು ತೆಗೆಯಬೇಕಾದರೆ ಮೆಜಾರಿಟಿ ಇದ್ದರೆ ತಾವು ಮೂವ್ ಮಾಡಿರುತ್ತೀರಿ ಮಾಡಿರಿ. ಏಕೆಂದರೆ ಅವರು ಏನು ಹೇಳುತ್ತಾರೆ, ನಾವೇನೂ ಗಲಾಟೆ ಮಾಡಿಲ್ಲ. ಈಗ ಜನ್ನತ್ ಭೀ ಯಾವ ಜೀಪಿನಲ್ಲಿ ಬಂದರು, ಜನತಾದಳದ ಜೀಪಿನಲ್ಲಿ ಆ ಹೆಣ್ಣುಮಗಳು ಬಂದಿದ್ದಾಳೆ. ಜನತಾದಳ ಜೀಪಿನಲ್ಲಿ ಹೆಣ್ಣುಮಗಳು ಬಂದಾಗ ನಮ್ಮ ಜನರು ಹೇಳಿದ್ದಾರೆ, ನಮ್ಮ ಸಹಾಯಕ ಬರಬೇಕು ಎಂದು ಕೇಳಿದ್ದಾರೆ. ಇನ್ನೂ ಕೂಡ ಮಲ್ಲಣ್ಣ ಯಾದ್‌ಗಿರಿ, ಮತ್ತು ಪ್ರೇಮ ನಿಮ್ಮ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯೆ. ಆಕೆಯೂ ಕೂಡ ಎಲ್ಲಿದ್ದಾಳೆ ಎಂಬುದು ಗೊತ್ತಿಲ್ಲ. ನಮ್ಮ ಗ್ರಾಮೀಣಾಭಿವೃದ್ಧಿ ಇಲಾಖೆಯ ಸಚಿವರಾದ ಪ್ರಕಾಶ್‌ರವರು ಏನಿದ್ದಾರೆ, ಅವರಿಂದ ಇವೊತ್ತು ನಮಗೆ ಇಷ್ಟೇ ಸ್ಪಷ್ಟೀಕರಣ ಬೇಕು. Rural Development Chief Secretary has no power to convene the meetings... ಅಡ್ಜರ್ನ್ ಮೀಟಿಂಗ್‌ಗೆ ಅದೇ ಸಭೇಯಲ್ಲಿ ಎಲ್ಲಾ ಕಡೆಗೂ ಏನೆಂದರೆ ಸೆಕ್ಷನ್ 196, 192ರ ಪ್ರಕಾರ ಸಭೆ ಕರೆಯತಕ್ಕಂಥ ಅಧಿಕಾರ ಇಲ್ಲ. ಇವೊತ್ತು ಸ್ಪಷ್ಟವಾಗಿ ಕರ್ನಾಟಕದ ಜನತೆಗೆ ಉಪಮುಖ್ಯಮಂತ್ರಿಗಳು ಹೇಳಲೇಬೇಕು, ಸಮಂಜಸವಾದ ಉತ್ತರ ನಮಗೆ ಬೇಕಾಗಿದೆ, ಇಲ್ಲದಿದ್ದರೆ ನಮಗೆ ಮತ್ತೆ ಚರ್ಚೆಗೆ

ಅವಕಾಶ ಮಾಡಿಕೊಡಿ, ಸಾಕಷ್ಟು ವಿಷಯಗಳಿದೆ, ನಮಗೆ ಸ್ಪಷ್ಟೀಕರಣ ಬೇಕಾಗಿಲ್ಲ. ಅಧ್ಯಕ್ಷರೆ, ಸಾಕಷ್ಟು ಸಲ ಈ ಸರ್ಕಾರಕ್ಕೆ ಸಂಬಂಧಪಟ್ಟ ಮಂತ್ರಿಗಳಿಗೆ, ಅಧಿಕಾರಿಗಳಿಗೆ ಛೀಮಾರಿ ಹಾಕಿದ್ದೇವೆ, ಪತ್ರಿಕೆಯಲ್ಲೂ ಕೂಡ ಬಂದಿದೆ. ಆದರೂ ಕೂಡ they are not prepared. ಇದು ಪ್ರಸ್ತಾಪ ಬಂದಾಗಲೇ ಹೋಗಿ ಕೇಳಿ ಬರತಕ್ಕಂಥದ್ದು ಏನು ಇದೆಯಲ್ಲಾ, this is very bad. They must be serious about all these things...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಕ್ಲಾರಿಫಿಕೇಷನನ್ನು ಕೇಳಬಯಸುತ್ತೇನೆ. ಅವರೇ ಒಪ್ಪಿಕೊಂಡರು. ಕೈಹಿಡಿದು ಕೂರಿಸತಕ್ಕಂಥದ್ದು ಎಂದರೆ ಇವರೇ ಹೋಗಿ ಹಿಡಿದು ಕೂಡಿಸಿದರು ಎಂದು ಅರ್ಥ. ನೀವು ಹೋಗುವವನಿಗೆ ಕೂಡಿರಿ ಎಂದು ಹೇಳಿದಿರಿ, ಸ್ವಲ್ಪ ಕೇಳಿ. ಯಾವ ರೂಲ್ಸ್‌ನಲ್ಲಿ ಒಂದು ಸಾರಿ ಅಡ್ಜರ್ನ್ ಮಾಡಿದರೆ ಪುನಃ ನಾವು ಕಂಡಕ್ಟ್ ಮಾಡಬಹುದಾ ಇಲ್ಲವಾ ಎಂದು ಹೇಳಿ, ನಮಗೆ ಹೇಳಿ ಎಂದು ಅವನಿಗೆ ಕೂರಿಸಿಕೊಂಡೆವು ಎಂದು ಹೇಳಿದರು. ಅಂದಾಗ basically they asked him to sit and decide the matter there only.. ಇದು ಯಾವಾಗ ಅಧ್ಯಕ್ಷ ಡಿಸೈಡ್ ಮಾಡುತ್ತಾನೆ, ಅಡ್ಜರ್ನ್ ಮಾಡುತ್ತಾನೆ, ಇವನಿಗೆ ಅಧಿಕಾರ ಇಲ್ಲ ಅವನಿಗೆ ಕೂಡಿಸಿಕೊಂಡು ಪುನಃ ಕರೆಯಬೇಕು ಎಂದು ಒಂದು. ಎರಡನೆಯದು, ಅವರೇ ಹೇಳಿದರು. ಬಿ.ಜೆ.ಪಿ.ಇಬ್ಬರು ಸದಸ್ಯರು, ಸಿ.ಪಿ.ಐ.ಯವರು ನಮಗೆ ಸಪೋರ್ಟ್ ಕೊಟ್ಟರು ಮೆಜಾರಿಟಿ ಆಯಿತು ಅದಕ್ಕೆ ನಾವು ಮಾಡಿದ್ದೇವೆ. ಸಂತೋಷ ಬಿ.ಜೆ.ಪಿ., ನೀವು ಒಂದಾಗಿ ಮೆಜಾರಿಟಿ ಇದೆ ಎಂದು ಅವನನ್ನು ಕೂಡಿಸಿಕೊಂಡಿರಿ. ನೀವೆಲ್ಲರೂ ಒಂದಾದಮೇಲೆ ಕನಿಷ್ಟ ಪಕ್ಷ ಒಂದು ಸ್ಪೆಷಲ್ ನೋಟೀಸ್ ಇಷ್ಯೂ ಮಾಡಿ ನೀವು ಅಧ್ಯಕ್ಷರ ಮುಖಾಂತರ ಕರೆಸಿ, ಅಧ್ಯಕ್ಷರು ಆ ಮೀಟಿಂಗ್‌ಗೆ ಬರಲಿಲ್ಲ ಎಂದರೆ, ರೆಫ್ಯೂಸ್ ಮಾಡಿದರೆ, ನಿಮ್ಮ ಇತರೇ ಸದಸ್ಯರುಗಳು ಯಾರಿದ್ದಾರೆ ಅವರಲ್ಲಿ ಹಿರಿಯ ಸದಸ್ಯರನ್ನು ಎಲೆಕ್ಟ್ ಮಾಡಿ ಕೂಡಿಸಿಕೊಂಡು ಮೀಟಿಂಗ್ ಮಾಡಿದ್ದರೆ ಅಭ್ಯಂತರ ಇರಲಿಲ್ಲ. ಆದರೆ ಬಂದಂಥ ಮೀಟಿಂಗ್‌ಗೆ ಅಧ್ಯಕ್ಷರು, ಉಪಾಧ್ಯಕ್ಷರು ಸೇರಿ ಅಡ್ಜರ್ನ್ ಮಾಡಿ ಹೋದಮೇಲೆ ಇದ್ದಂಥ ಜನರನ್ನು ತೆಗೆದುಕೊಂಡು ಕುಳಿತು, ಕಾನೂನಿನಲ್ಲಿ ಬರುತ್ತದೆಯೇ ಇಲ್ಲವೇ ಹೇಳು ನಮಗೆ ಎಂದು ಹೇಳಿ ಕೂಡಿಸಿಕೊಂಡು ಹತ್ತು ನಿಮಿಷ ಹೊರಗಡೆ ಹೋಗಿ ಪುನಃ ಒತ್ತಾಯ ಮಾಡಿದಮೇಲೆ ಆತ ಒಳಗೆ ಬಂದು ಕಂಡಕ್ಟ್ ಮಾಡಬೇಕೆಂದರೆ, ಇದು ಯಾವುದು? ಅದಕ್ಕಾಗಿ ಅಧ್ಯಕ್ಷರೆ, ಇದು ಕಂಪ್ಲೀಟ್ ಪ್ರೊಸೀಡಿಂಗ್ಸ್ ಕ್ಯಾನ್ಸಲ್ ಆಗಬೇಕು, ಹೊಸ ಚುನಾವಣೆ ನಡೆಯಲಿ ಮತ್ತು ಇಂತಹ ಘಟನೆಗಳು ಪುನಃ ಅಲ್ಲಿ ನಡೆಯತಕ್ಕಂಥದ್ದು ಆಗಬಾರದು. ಹಾಗೇನಾದರೂ ಆದರೆ ಅದಕ್ಕೆ ಸಂಪೂರ್ಣವಾದಂಥ ಜವಾಬ್ದಾರಿಯನ್ನು ಸರ್ಕಾರದವರು ಹೊತ್ತಿಕೊಳ್ಳಬೇಕಾಗುತ್ತದೆ ಎಂಬ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಸಭಾಧ್ಯಕ್ಷರೆ, ಮಾನ್ಯ

ಸಚಿವರಾದಂಥ ದರ್ಶನಾಪುರ್‌ರವರು ಆ ಸಭೆಯಲ್ಲಿ ನಾನು ಹಾಜರಿದ್ದೆ, ಅಲ್ಲಿ ಏನೇನು ನಡೆಯಿತು ಎಂಬ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರೂ ಕೂಡ ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕಂಥಹವರು ಮತ್ತು ಅವರು ಕೊಟ್ಟಿರತಕ್ಕಂಥ ಹೇಳಿಕೆಗಳೂ ಕೂಡ ಜವಾಬ್ದಾರಿಯಿಂದ ಕೊಟ್ಟಿರತಕ್ಕಂಥದ್ದು ಎಂದು ನಾನು ಭಾವಿಸಿಕೊಳ್ಳುತ್ತೇನೆ. ಆವೊತ್ತು ಶನಿವಾರ ನಡೆದಿರತಕ್ಕಂಥದ್ದು ಈ ಮೀಟಿಂಗ್. ಈ ಸಭೆ ಕರೆದಂತಹದ್ದು, ಇದೊಂದು ವಿಶೇಷ ಸಭೆ. ಈ ವಿಶೇಷ ಸಭೆಯನ್ನು ಸ್ಥಾಯಿ ಸಮಿತಿಗಳನ್ನು ರಚನೆ ಮಾಡಲಿಕ್ಕಾಗಿ ಕರೆದಿರತಕ್ಕಂಥದ್ದು ಅದರ ಬಗ್ಗೆ ಇನ್ನೂ ವಿವರವಾದ ಮಾಹಿತಿಗಳು ಲಿಖಿತ ಮೂಲಕ ಬರುತ್ತಾ ಇದೆ. ಅದು ಇನ್ನೇನು ಒಂದು ಹತ್ತು ಹದಿನೈದು ನಿಮಿಷದಲ್ಲಿ ಬರುತ್ತದೆ, ಅದಕ್ಕೆ ನಾನು ವಿವರವಾದ ಉತ್ತರವನ್ನು ಕೊಡುತ್ತೇನೆ. ಈಗ ವಿದ್ಯಮಾನಗಳು ಏನು ನಡೆದಿದ್ದಾವೆ ಎಂದರೆ, ಅಧ್ಯಕ್ಷರು ಸಭೆಗೆ ಬಂದ ತಕ್ಷಣವೇ ಸಭೆಯಲ್ಲಿ ಗಲಾಟೆ ಆಯಿತು, ಸದಸ್ಯರಿಗೆ ರಕ್ಷಣೆ ಇಲ್ಲ ಎಂದು ಆ ತರಹದ ಹೇಳಿಕೆಯನ್ನು ಮಾಡಿ ಸಭೆಯನ್ನು ನಾನು ಮುಂದೂಡಿದ್ದೇನೆ ಎಂದು ಹೇಳಿ ಅವರು ಹೊರಟುಬಿಡುತ್ತಾರೆ. ನನಗೆ ಗೊತ್ತಿರುವ ಪ್ರಕಾರ ಸೆಕ್ಷನ್ 180ರ ಪಂಚಾಯಿತಿ ಆಕ್ಟ್ ಪ್ರಕಾರ ಅಲ್ಲಿ ಮೆಜಾರಿಟಿ ಸದಸ್ಯರ ಅಭಿಪ್ರಾಯ ಇಲ್ಲದೆ ಸಭೆಯನ್ನು ಮುಂದೂಡಲಿಕ್ಕೆ ಬರುವುದಿಲ್ಲ. ಅಧ್ಯಕ್ಷರಿಗೆ ಸೊಮೊಟೊ, ಒಂದು ವಿಶೇಷವಾದಂಥ ಸಭೆ ಕರೆದು ಉಪಸಮಿತಿಗಳನ್ನು ರಚನೆ ಮಾಡಲಿಕ್ಕಾಗಿ ಕರೆದಿರತಕ್ಕಂಥ ಸಭೆಯನ್ನು ಹಠಾತ್ ಅವರಿಗೆ ಮೆಜಾರಿಟಿ ಇಲ್ಲ ಎನ್ನುವ ಕಾರಣಕ್ಕಾಗಿ, ಆ ಉಪಸಮಿತಿಗಳು ಅವರಿಗೆ ದಕ್ಕುವುದಿಲ್ಲ ಎನ್ನುವ ಕಾರಣಕ್ಕಾಗಿ....

ಶ್ರೀ ವಾಟಾಳ್ ನಾಗರಾಜ್: ತಮಗೆ ಇದರ ಬಗ್ಗೆ ಸಂಪೂರ್ಣ ತಿಳುವಳಿಕೆ ಇದ್ದರೆ ಹೇಳಿಕೆಯನ್ನು ಕೊಡಿ. ಇಲ್ಲವೆಂದರೆ ಸ್ವಲ್ಪ ಮುಂದಕ್ಕೆ ಹಾಕಿ ಹೇಳಿಕೆ ಕೊಡುವುದು ಒಳ್ಳೆಯದು. 'ಏಕೆಂದರೆ ಈಗ ತಕ್ಷಣ 'ಸಂತೆಗೆ ಮೂರು ಮೊಳ' ಹೇಳುವುದು ಬೇಡ. ಮೊದಲು ತಾವು ಅಲ್ಲಿ ನಡೆದಿರತಕ್ಕ ವಿದ್ಯಮಾನಗಳು ಏನು ಎಂದು ಅರ್ಥ ಮಾಡಿಕೊಂಡು ಹೇಳಿದರೆ ಸ್ವಲ್ಪ ಬೆಲೆ ಬರುತ್ತದೆ. ನನಗೆ ತಮ್ಮ ಉತ್ತರದ ಧಾಟಿ ಬಗ್ಗೆ ತಕರಾರೇನೂ ಇಲ್ಲ. ತಮಗೆ ಈ ವಿಚಾರದ ಬಗ್ಗೆ ಅರಿವಿದೆಯಾ? ಅಲ್ಲಿ ನಡೆದಿರತಕ್ಕ ವಿಧ್ಯಾಮಾನಗಳು ಏನು ಎಂಬುದನ್ನು ಸರ್ಕಾರ ತಮಗೆ ಸ್ಪಷ್ಟವಾಗಿ ಹೇಳಿದೆಯಾ? ದರ್ಶನಾಪುರ್‌ರವರು ಅಲ್ಲಿ ಇದ್ದವರು, ಅವರು ಹೇಳಬೇಕಾದ್ದೇ ಅಲ್ಲಿ ಏನೂ ನಡೆದಿಲ್ಲ ಎಂದು ಅವರು ಸಾರಸಗಟಾಗಿ ತಳ್ಳಿಹಾಕಿದರು. ತಾವು ಉತ್ತರವನ್ನು ಕೊಡುವಂಥ ಕಾಲದಲ್ಲಿ ತಮಗೆ ಸ್ಪಷ್ಟವಾಗಿ ಅಲ್ಲಿ ನಡೆದಿರತಕ್ಕಂಥ ವಿಚಾರ ಗೊತ್ತಿದೆಯೇ? ಏಕೆಂದರೆ ಸಭೆಯನ್ನು ಮುಂದೂಡಿ ಮತ್ತೊಂದು ಸಭೆಯನ್ನು ನಡೆಸಿಕೊಂಡು ಅವರಿಗೆ ಇಚ್ಛೆ ಬಂದಂತೆ ಚುನಾವಣೆ ಮಾಡುವುದಕ್ಕಾಗುವುದಿಲ್ಲ. ಮತ್ತು ಚರ್ಚೆಗಿಂತ ಹೆಚ್ಚಾಗಿ ಮಾನ್ಯ ಅಧ್ಯಕ್ಷರು ನಿಲುವಳಿ ಸೂಚನೆಯನ್ನು ತೆಗೆದುಕೊಂಡಿದ್ದಾರೆ ಎಂಬುದು ಒಂದು. ಎರಡನೆಯದು ತಮ್ಮಲ್ಲಿ ನಾನು ಮನವಿ ಏನು ಮಾಡುತ್ತೇನೆ ಎಂದರೆ, ತಾವು ಸ್ಪಷ್ಟವಾಗಿ ಇದರ ಬಗ್ಗೆ ಅರಿತಿದ್ದೀರಾ? ಅದನ್ನು ತಾವು ಹೇಳಬೇಕು.

ಶ್ರೀ ಎಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೆ, ನಾನು ಆಗಿನಿಂದಲೂ ಗಮನಿಸುತ್ತಿದ್ದೇನೆ. ಇವರೇನೋ ಆರ್ಗ್ಯೂ ಮಾಡಿದ್ದಾರೆ, ಅದಕ್ಕೆ ಕೌಂಟರ್ ಆರ್ಗ್ಯುಮೆಂಟ್ ಎನ್ನುವ ಲೆಕ್ಕಕಾದರೆ ಆಗಬಾರದು. ಈಗ ಅವರಿಗೂ ಸೂಕ್ತ ಮಾಹಿತಿ ಇಲ್ಲ, ಈಗ ಇವರು ಮಾಡಿರತಕ್ಕ ಅಲಿಗೇಷನ್ ಬಹಳ ಪ್ರಭಲವಾಗಿದೆ, ಇದು ನೋಡಿದವರಿಗೆ ಕಣ್ಣಿಗೆ ಕಾಣುವಷ್ಟು ಸಿಂಪಲ್ ಆಗಿ ಕಾಣುತ್ತಾ ಇಲ್ಲ. ನಮಗೆ ಅದು ಇದು ಎಂದು ಯಾವುದು ಸರಿಯೋ ಗೊತ್ತಿಲ್ಲ, ಇದನ್ನು ನೋಡಿದರೆ ಈ ವ್ಯವಹಾರ ಅಷ್ಟೊಂದು ಸರಳವಾಗಿಲ್ಲ. ಏನೋ ನಡೆದಿದೆ. ಅದರ ಪೂರ್ತಿ ಮಾಹಿತಿ ಇಲ್ಲದೆಯೇ ಉಪ ಮುಖ್ಯಮಂತ್ರಿಗಳು ಇವರೊಂದು ಆರ್ಗ್ಯೂ ಮಾಡುತ್ತಿದ್ದಾರೆ. ಅದರ ವಿರುದ್ಧವಾಗಿ ಆರ್ಗ್ಯೂ ಮಾಡಬೇಕು ಎಂದುಆ ರೀತಿಆಗುವುದು ಬೇಡ. ಆಕಸ್ಮಾತ್ ಏನಾದರೂ ಅಲ್ಲಿ ತಪ್ಪಾಗಿದ್ದರೆ ತಿದ್ದಬೇಕು ಎನ್ನತಕ್ಕಂಥ ಮನಸ್ಸು ಸರ್ಕಾರಕ್ಕೆ ಇರಬೇಕು ಎನ್ನಿಸುತ್ತದೆ.

ಶ್ರೀ ಸಿದ್ಧರಾಮಯ್ಯ: ವರದಿ ಇನ್ನೂ ಸರ್ಕಾರದ ಕೈಗೆ ಬಂದಿಲ್ಲ, ಇನ್ನು ಕೆಲವೇ ನಿಮಿಷಗಳಲ್ಲಿ ಬರುತ್ತದೆ, ಬಂದಮೇಲೆ ಸಂಪೂರ್ಣವಾದ ಹೇಳಿಕೆಗಳನ್ನು ಕೊಡುತ್ತೇನೆ ಎಂದು ನಾನು ಹೇಳಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಇಲ್ಲಿ ಯಾರು ಉತ್ತರ ಕೊಡುವಂಥ ಲಕ್ಷಣ ಕಾಣುತ್ತಿಲ್ಲ. ಪರಸ್ಪರ ಅಲ್ಲಿ ಆಗಿರತಕ್ಕ ಘಟನೆಗಳ ಬಗ್ಗೆ ನಾನು ಚರ್ಚೆ ಮಾಡಬಹುದೇ ಹೊರತು, ನಮ್ಮ ಮುಂದೆ ಸ್ಪಷ್ಟವಾಗಿ ಜಿಲ್ಲಾಪರಿಷತ್ತಿನ ಆಕ್ಟ್ ಇದೆ. ಒಬ್ಬ ಅಧ್ಯಕ್ಷ ಈ ಸಮಿತಿಗಳನ್ನು ರಚನೆ ಮಾಡುವಂಥ ಹಿನ್ನೆಲೆಯಲ್ಲಿ ಸಭೆ. ಆ ಸಭೆಯಲ್ಲಿ ಗಲಭೆ, ಬೇರೆ ವಾತಾವರಣ ಇದೆಯೆಂದು ಸಭೆಯನ್ನು ಮುಂದೂಡಿ ಎದ್ದು ಹೊರಟುಹೋಗುತ್ತಾರೆ. ಯಾವುದೇ ಚುನಾವಣೆ ಮಾಡುವಂಥ ಸಂದರ್ಭದಲ್ಲಿ ಒಂದು ಸಾರಿ ನನಗೆ ಬಹುಮತ ಇಲ್ಲ ಎಂದು ಅನ್ನಿಸಿದಾಗ ಈ ತರಹ ಮುಂದೂಡಿ ಹೊರಟುಹೋಗುತ್ತಾರೆ. ಆಗ ಬಹುಮತ ಇರುವಂಥ ಸದಸ್ಯರು ಇನ್ನೊಬ್ಬನನ್ನು ಅಧ್ಯಕ್ಷನನ್ನಾಗಿ ಮಾಡಿ ಕೂರಿಸಿಕೊಂಡು ಈ ಸಮಿತಿಗಳನ್ನು ರಚನೆ ಮಾಡುವ ಅಧಿಕಾರ ಇದೆಯೋ ಇಲ್ಲವೋ ಎಂಬುದೇ ಇಲ್ಲಿ ಮುಖ್ಯವಾದಂಥದ್ದು. ಅದು ಇದೆ ಎನ್ನುವುದಾದರೆ, ಇದರಲ್ಲಿ ಕೊಶ್ಚನ್ ಮಾಡುವುದಕ್ಕೆ ಏನೂ ರೈಟ್ಸ್ ಇಲ್ಲ. ಅದು ಇಲ್ಲ ಎನ್ನುವುದಾದರೆ ಆಗಿರುವ ಸಮಿತಿ ರದ್ದಾಗುತ್ತದೆ, ಹೊಸದಾಗಿ ಚುನಾವಣೆಯಾಗುತ್ತದೆ.

12.40 ಪಿ.ಎಂ

ಇನ್ನೊಂದು ಭಾಗ ಅವರು ಯಾವ ರೀತಿ ಸಂಚು ಮಾಡಿದರು, ಗಡಿಬಿಡಿ ಮಾಡಿದರು, ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ ಕಾನೂನಿಗೆ ಯಾರೂ ದೊಡ್ಡವರಲ್ಲ. ಜಿಲ್ಲಾ ಪರಿಷತ್ತು ಆಕ್ಟ್ ಪ್ರಕಾರ ಅಧ್ಯಕ್ಷರು ಸಮಿತಿಗಳನ್ನು ರಚನೆ ಮಾಡುವುದಕ್ಕೆಂದು

ನಿಶ್ಚಿತವಾದಂತಹ ದಿನಾಂಕದಂದು ಸಭೆಯನ್ನು ಕರೆದಿದ್ದರು. ಅಲ್ಲಿ ಗಲಭೆ ವಾತಾವರಣವಾಯಿತು ಅಥವಾ ಅಲ್ಲಿ ಕುಳಿತು ವಾತಾವರಣವನ್ನು ತಿಳಿ ಮಾಡುವುದಕ್ಕೆ ಏನಾದರೂ ಪ್ರಯತ್ನ ಮಾಡಿದರೋ, ಇಲ್ಲವೋ ನಮಗೆ ಗೊತ್ತಿಲ್ಲ. ಅವರು ಉತ್ತರವನ್ನು ಕೊಡಬೇಕಾಗುತ್ತದೆ. ಆದರೆ ಅವರು ಹೊರಟು ಹೋದ ಮೇಲೆ ಬಹುಮತವಿಲ್ಲವೆನ್ನುವ ಕಾರಣಕ್ಕೋಸ್ಕರ ಅಡ್ಜರ್ನ್‌ಮಾಡಿ ಎದ್ದು ಹೊರಟುಹೋಗಿದ್ದಾರೋ? ಬಹುಮತವಿದ್ದು ಅಧ್ಯಕ್ಷರನ್ನು ಮಾಡಿಕೊಂಡು ಸಮಿತಿಗಳನ್ನು ಮಾಡಿದ್ದಾರೆ. ಅಧಿಕಾರವಿದ್ದರೆ ಯಾರೂ ಪ್ರಶ್ನೆ ಮಾಡುವುದಕ್ಕೆ ಬರುವುದಿಲ್ಲ. ಅಧಿಕಾರವಿಲ್ಲವೆಂದರೆ ರದ್ದಾಗುತ್ತದೆ, ಉಳಿದಂತೆ ವಿಷಯ ಚರ್ಚೆಯಾಗಲೀ, ನನ್ನದು ಏನೂ ಅಭ್ಯಂತರವಿಲ್ಲ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಕಾನೂನಿನ ಪ್ರಕಾರವಾಗಿ ನಾನು ಹೇಳುವುದೇನೆಂದರೆ 180ರ ಪ್ರಕಾರ ಕ್ಲಾಸ್ 'ಜೆ' "Any ordinary meeting may with the consent of the majority of the Members present.."

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಸ್ಪೆಷಲ್ ಮೀಟಿಂಗ್ ಹಾಗೆ ಮಾಡುವುದಕ್ಕೆ ಬರುವುದಿಲ್ಲ. ವಿಶೇಷ ಸಭೆ ಎಂದು ಕರೆದಿದ್ದಾರೆ.

ಶ್ರೀ ಆರ್.ಧರ್ಮ್‌ಸಿಂಗ್: ಮಾನ್ಯ ಅಧ್ಯಕ್ಷರೆ, ಅದರ ಕಾಪಿ ಬೇಕೆಂದರೆ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಅದನ್ನು ವಿಶೇಷ ಸಭೆ ಎಂದು ಕರೆದಿದ್ದಾರೆ. ಆ ಕಾರಣಕ್ಕೋಸ್ಕರ ವಿಶೇಷ ಸಭೆ ಎಂದು ಕರೆದಿರುವಂಥಾದ್ದು ಉಪ-ಸಮಿತಿಗಳನ್ನು ರಚನೆ ಮಾಡುವುದಕ್ಕೋಸ್ಕರ, ಆ ಸಭೆಯಲ್ಲಿ ಅಧ್ಯಕ್ಷರು ಬಂದಂತಹ ಸದಸ್ಯರುಗಳಿಗೆ ರಕ್ಷಣೆ ಇಲ್ಲವೆಂದು ಅದಕ್ಕೋಸ್ಕರ ಈ ಸಭೆಯನ್ನು ಮುಂದಕ್ಕೆ ಹಾಕುತ್ತಿದ್ದೇನೆಂದು ಹೇಳಿ ಅವರು ಸಭೆಯನ್ನು ಮುಂದಕ್ಕೆ ಹಾಕುತ್ತಾರೆ. ಆದರೆ ಕಾನೂನಿನಲ್ಲಿ ಒಂದು ಉದ್ದೇಶಕ್ಕೋಸ್ಕರ ಸಭೆಯನ್ನು ಕರೆದು ಮೆಜಾರಿಟಿ ಇಲ್ಲವೆನ್ನುವ ಕಾರಣಕ್ಕೋಸ್ಕರ ಸಭೆಯನ್ನು ಮುಂದಕ್ಕೆ ಹಾಕುತ್ತೇವೆನ್ನುವಂಥಾದ್ದು ಕೂಡ ಪ್ರಜಾಪ್ರಭುತ್ವದಲ್ಲಿ ವಿರುದ್ಧವಾದಂತಹ ನೀತಿಯಾಗಿದೆ. ಅದು ಯಾವುದೇ ತಾಲ್ಲೂಕು ಪಂಚಾಯತ್‌ನ ಸಭೆಯಾಗಬಹುದು ಜಿಲ್ಲಾ ಪಂಚಾಯತ್ ಆಗಬಹುದು, ಅದು ಯಾವುದೇ ಸಭೆಯಲ್ಲಿ ನಡೆದಿರುವಂತಹ ನಡವಳಿಕೆಯಾಗಬಹುದು. ಅದಕ್ಕೆ ಸಂಬಂಧಪಟ್ಟಂತಹ ಕಾಯಿದೆ ಇದೆ. ಅದು ಅದಕ್ಕೆ ಇರುವಂತಹ ನಿಯಮಾವಳಿಯಲ್ಲಿ ನಡೆಯಬೇಕಾಗುತ್ತದೆ, ಇಲ್ಲದಿದ್ದರೆ ಅದು ಕಾನೂನುಬಾಹಿರವಾಗುತ್ತದೆ. ಆ ರೀತಿಯಾಗಿ ಇಲ್ಲಿ ನಡೆದಿರುವಂತಹ ಕ್ರಮವಾಗಿದೆ, ಇದಾದನಂತರ ಅಂದರೆ ಅಧ್ಯಕ್ಷರು, ಉಪಾಧ್ಯಕ್ಷರು ಎದ್ದು ಹೋದ ಮೇಲೆ ಅಲ್ಲಿರುವಂಥವರು ಸಿ ಇ ಓ ರವರನ್ನು ಕೇಳಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕಾನೂನು ಪ್ರಕಾರ ಏನು ಮಾಡಬೇಕೆಂದು ಕೇಳಿದಾಗ ಸಿ ಇ ಓ ರವರು ಏನು ಮಾಡಿದ್ದಾರೆ.

MR. SPEAKER: You should try to ease the situation.

(INTERRUPTIONS)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, there is nothing.. Special meeting.. Why do you stand on prestige?

(INTERRUPTIONS)

ಶ್ರೀ ಸಿದ್ದರಾಮಯ್ಯ: ಇಲ್ಲಿ ಪ್ರೆಸ್ಟೀಜ್ ಪ್ರಶ್ನೆ ಇಲ್ಲ. ಈಗ ಅಲ್ಲಿ ನಡೆದಿರುವಂತಹ ಎಲ್ಲಾ ಪ್ರೊಸೀಡಿಂಗ್‌ನ್ನು ತರಿಸುತ್ತೇವೆ. ಅಲ್ಲಿ ಕಾನೂನು ಬಾಹಿರವಾಗಿ ಆಗಿದ್ದರೆ ಅದು ಕಾನೂನು ಬಾಹಿರವೇ ಆಗುತ್ತದೆ. ಅದು ಕಾನೂನಿನ ಚೌಕಟ್ಟಿನಲ್ಲೇ ನಡೆದಿದ್ದರೆ ಅದು ಕಾನೂನಿನ ಪ್ರಕಾರವೇ....

ಶ್ರೀ ಎಂ.ಸಿ.ನಾಣಯ್ಯ- ಮಾನ್ಯ ಅಧ್ಯಕ್ಷರೆ, ಈಗ ಅಲ್ಲಿ ನಡೆದಿರುವಂತಹ ಎಲ್ಲಾ ನಡವಳಿಕೆಗಳನ್ನು ಸರ್ಕಾರ ತರಿಸಿಕೊಂಡು ಕಾನೂನಿನ ಅನುಗುಣವಾಗಿ ನಾವು ಒಂದು ಕ್ರಮವನ್ನು ಕೈಗೊಳ್ಳುತ್ತಾ ಇದ್ದೇವೆ. ಈಗ ನಮಗೆ ಒಂದು ಕಾನೂನು ಇದೆ. ಆ ಕಾನೂನಿನ ವ್ಯಾಪ್ತಿಯಲ್ಲಿ ಅಧ್ಯಕ್ಷರು ಸಭೆಯನ್ನು ನಡೆಸುವುದಕ್ಕೆ ಜವಾಬ್ದಾರರು ಆಗುತ್ತಾರೆ. ಅಲ್ಲಿ ಅಧ್ಯಕ್ಷರು ಯಾರು ಆಗಿರುತ್ತಾರೆ, ಅವರು ಸಭೆಯನ್ನು ನಡೆಸಬೇಕಾಗುತ್ತದೆ. ಅವರು ಗೈರು ಹಾಜರಾದಂತಹ ಸಂದರ್ಭದಲ್ಲಿ ಉಪಾಧ್ಯಕ್ಷರು ಸಭೆಯನ್ನು ನಡೆಸಬೇಕಾಗುತ್ತದೆ. ಅಧ್ಯಕ್ಷರು ಉಪಾಧ್ಯಕ್ಷರು ಇಬ್ಬರು ಗೈರು ಹಾಜರಾದಂತಹ ಸಂದರ್ಭಗಳು ಬರುವಂತಹ ಪರಿಸ್ಥಿತಿ ಇಲ್ಲ. ಅಂತಹ ಸಂದರ್ಭದಲ್ಲಿ ಬೇರೆ ಬೇರೆ ಕ್ರಮಗಳು ಇವೆ. ಆದುದರಿಂದ ಇದರಲ್ಲಿರುವಂತಹ ಸಂಪೂರ್ಣವಾದಂತಹ ಮಾಹಿತಿಯನ್ನು ತರಿಸುತ್ತೇವೆ. ಅದನ್ನು ತರಿಸಿಕೊಂಡು ಮಾನ್ಯ ಸದಸ್ಯರುಗಳು ಎತ್ತಿರುವಂತಹ ವಿಚಾರಗಳನ್ನು ಕೂಲಂಕಷವಾಗಿ ಚರ್ಚೆ ಮಾಡುತ್ತೇವೆ. ಯಾವುದೇ ಸಂದರ್ಭದಲ್ಲಿ ಇಲ್ಲಿ ಕಾನೂನು ಬಾಹಿರವಾಗಿದ್ದರೆ ಇದೇ ಸದನದಲ್ಲಿ ನಾವು ಕಾನೂನು ಬಾಹಿರವೆಂದು ಹೇಳುವಂಥಾದ್ದಕ್ಕೆ ಮುಂದೆ ಬರುತ್ತೇವೆ. ಆದುದರಿಂದ ತಾವು ನಮಗೆ ಸ್ವಲ್ಪ ಸಮಯವನ್ನು ಕೊಡಿ, ನಾವು ಎಲ್ಲಾ ಮಾಹಿತಿಗಳನ್ನು ತೆಗೆದುಕೊಂಡು ಹೇಳುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜು ಖರ್ಗೆ: ಸನ್ಮಾನ್ಯ ಅಧ್ಯಕ್ಷರೇ, my request is, till then that proceedings may be stayed; that should not be implemented. ಏನಾಗುತ್ತದೆ. ಇಲ್ಲೀಗಲ್ ಪ್ರೋಸಿಡಿಂಗ್ಸ್ ನಾವು ಇಂಪ್ಲಿಮೆಂಟ್ ಮಾಡಿದ ಹಾಗೆ ಆಗುತ್ತದೆ.

SRI M.C.NANAIAH:- Let me make it very clear to you. If any election contrary to accepted rules and

regulations takes place, it will not be put into effect at all. Secondly, any person, who is agrieved, he has the right to get the whole thing stayed in the court. In the meanwhile, we will try to get the records and place it before the House.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಮಾಡಿ, till then you direct C.E.O. not to implement it. ನಾವು ತಪ್ಪನ್ನೇ ಇಂಪ್ಲಿಮೆಂಟ್ ಮಾಡಿದ ಹಾಗೆ ಆಗುತ್ತದೆ. ಅದಕ್ಕೆ ದಯಮಾಡಿ ಸಿಇಒಗೆ ಹೇಳಿಬಿಡಿ. ನೀವು ರೆಕಾರ್ಡ್ ತರಿಸಿಕೊಂಡು ಎಕ್ಸಾಮಿನ್ ಮಾಡುವವರೆಗೆ ಮುಂದಿನ ಕ್ರಮವನ್ನು ತೆಗೆದುಕೊಳ್ಳಬೇಡಿ ಎಂದು ಅವರಿಗೆ ಹೇಳಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ಯಾವುದೇ ಸಮಿತಿ ಸಭೆಯನ್ನು ಮಾಡದೆ ಒಂದು ವಿಚಾರವನ್ನು ತೀರ್ಮಾನ ಮಾಡದೇ ಅದನ್ನು ಜಾರಿಗೆ ಕೊಟ್ಟು ಬಿಡುತ್ತಾರಾ? ಆದುದರಿಂದ ಇದರಲ್ಲಿ ಪ್ರೆಸ್ಟೀಜ್ ಇಲ್ಲ. ಕಾನೂನು ಬಾಹಿರವಾಗಿ ಆಗಿದ್ದರೆ ಅದು ಕಾನೂನು ಬಾಹಿರವಾಗುತ್ತದೆ, ಕಾನೂನಿನ ಪ್ರಕಾರವೇ ನಡೆದಿದ್ದರೆ ಅದನ್ನು ಕಾನೂನು ಪ್ರಕಾರವಾಗಿದೆ ಎಂದಾಗುತ್ತದೆ. ಇದರ ಬಗ್ಗೆ ಏನಾಗಿದೆ ಎಂಬುದನ್ನು ನಾವು ನಡವಳಿಕೆಯನ್ನು ತರಿಸಿ ನೋಡೋಣ.

ಶ್ರೀ ಎಂ.ಮಲ್ಲಿಕಾರ್ಜು ಖರ್ಗೆ: ಮಾನ್ಯ ಅಧ್ಯಕ್ಷರೆ, ಅವರು ಒತ್ತಾಯ ಮಾಡಿದಮೇಲೆ ಮಾಡುತ್ತಾರೆ. ಅವರಿಗೆ ಇಬ್ಬರು ಮಂತ್ರಿಗಳು ಹೇಳಿದ ಮೇಲೆ ಏನು ಮಾಡುತ್ತಾರೆ. ಇವರು ಹೋಗಿ ಒತ್ತಾಯ ಮಾಡದೇ ಹೋಗಿದ್ದರೆ, ಅಲ್ಲಿ ಆ ಐಎಎಸ್ ಆಫೀಸರ್ ಕೊಡುತ್ತಾ ಇರಲಿಲ್ಲ.

ಶ್ರೀ ಆರ್.ಧರ್ಮ್‌ಸಿಂಗ್: ಮಾನ್ಯ ಅಧ್ಯಕ್ಷರೆ, ಅವರು ಈಗಲೂ ಕೂಡ ಪ್ರೊಸೀಡಿಂಗ್ಸ್ ಪುಸ್ತಕ ತರುತ್ತಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಅಲ್ಲಿ ನಡೆದಿರುವಂತಹ ಪ್ರೊಸೀಡಿಂಗ್ಸ್ ತರಿಸಿ ನೋಡಿ. ಈಗ ನಡೆದಿಲ್ಲವೆಂದು ವಿಡಿಯೋಕ್ಯಾಸೆಟ್ ತರಿಸೋಣವೇ, ಇದು ಮಾತ್ರ ಅತಿಯಾಯಿತು, ಇಂಥದ್ದು ಯಾವ ಭಾಷಣದಲ್ಲೂ ಆಗಿಲ್ಲ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾವು ಎಲ್ಲಾ ನಡವಳಿಕೆಗಳನ್ನು ತರಿಸುತ್ತೇವೆ. ಅಲ್ಲಿ ಕಾನೂನು ವಿರುದ್ಧವಾಗಿ ಆಗಿದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಈ ಅಧಿಕಾರವೆನ್ನುವಂಥಾದ್ದು

ಏನಿದೆ, ಇದರಲ್ಲಿ ದುರಹಂಕಾರವಿರಬಾರದು.

ಶ್ರೀ ಸಿದ್ದರಾಮಯ್ಯ: ಇದರಲ್ಲಿ ದುರಹಂಕಾರ ಏನು ಇದೆ?

ಶ್ರೀಮತಿ ಪ್ರಮೀಳಾ ನೇಸರ್ಗಿ: ಮಾನ್ಯ ಅಧ್ಯಕ್ಷರೆ, ಸಕಲೇಶಪುರದಲ್ಲಿ ಇದೇ ರೀತಿಯಲ್ಲಿ ಆಯಿತು. ಆಗಲೂ ಇದೇ ಸರ್ಕಾರವಿತ್ತು. ಇದು ಆಗಿಲ್ಲವೆನ್ನುವುದಲ್ಲ. ಇನ್ನು ಮುಂದೆ ಈ ರೀತಿಯಾಗಬಾರದೆಂಬುದು ಮುಖ್ಯವಾದ ಪ್ರಶ್ನೆಯಾಗಿದೆ.

ಅಧ್ಯಕ್ಷರು: ಈಗ ಒಂದು ತೀರ್ಮಾನಕ್ಕೆ ಬರೋಣ. ಈ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಕೆಳಹಂತದಲ್ಲಿರುವಂತಹ ಸಂಸ್ಥೆಯಲ್ಲಿ ಅವರು ಏನು ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಾರೆ ಅವರು ಹೇಗೆ ನಡೆಸಿದರು ಎನ್ನುವಂಥಾದ್ದು ನಾವು ಚರ್ಚೆ ವಸ್ತುವನ್ನಾಗಿ ತೆಗೆದುಕೊಳ್ಳುವುದು ಬೇಡ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ ನಾನು I am giving you my mind. ಅವರು ಕೆಳ ಹಂತದಲ್ಲಿ ಸಭೆಯ ನಡವಳಿಕೆಯನ್ನು ಹೇಗೆ ಹೇಗೆ ನಡೆಸಿದರೆಂಬ ವಿವರಗಳಿಗೆ ನಾವು ಹೋಗುವುದು ಬೇಡ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೇ, I am telling you as to how they are behaving.

MR. SPEAKER:- You did not hear me. ತಾವು ಏಕೆ ಆತುರ ಪಡುತ್ತೀರಿ. ಸನ್ಮಾನ್ಯ ಯಡಿಯೂರಪ್ಪನವರು ಒಂದು ವ್ಯಾಲಿಡ್ ಪಾಯಿಂಟ್ ಅನ್ನು ರೈಸ್ ಮಾಡಿದರು. ಅವರೇ ಆಗಲಿ, ನಾವಾಗಲಿ ಒಂದು ಶಾಸನವನ್ನು ರೂಪಿಸಿದ್ದೇವೆ. We have to work only in accordance with those rules and regulatioins. No institution can violate rules and regulations which are in operation and act arbituarily, ಎನ್ನುವಂಥ ಮಾತನ್ನು ಹೇಳಿದ್ದಾರೆ. ಯಾವುದೇ ಸರ್ಕಾರವೆನಿಸಿ ಕೊಳ್ಳುವಂಥಾದ್ದು ಕೆಳ ಹಂತದಲ್ಲಿರುವಂತಹ ಒಂದು ಸಂಸ್ಥೆ ಶಾಸನವನ್ನು ಉಲ್ಲಂಘನೆ ಮಾಡಿ ಕೆಲಸ ಮಾಡಿದರೆ ನಿಯಮಗಳನ್ನು ಗಾಳಿಗೆ ತೂರಿ ತಮ್ಮ ಮನಸ್ಸಿಗೆ ಬಂದ ಹಾಗೆ ಅವರು ಮಾಡಿದ್ದರೆ, ಆ ಪ್ರೊಸೀಡಿಂಗ್ಸ್ ಯಾವುದೂ ನಿಲ್ಲುವುದಕ್ಕೆ ಸಾಧ್ಯವಿಲ್ಲ. ಈಗ ಇತ್ತೀಚೆಗೆ ಬಂದಿರುವಂಥಾದ್ದು ಈ ಮೀಟಿಂಗ್ ಬಗ್ಗೆ, ಇವರ ಬಗ್ಗೆ ಅವರು ಸಂಜೆಯೊಳಗೆ ಎಲ್ಲಾ ಮಾಹಿತಿಗಳನ್ನು ತರಿಸಿಕೊಳ್ಳಲಿ latest by this evening, ಸಂಜೆಯೊಳಗೆ ಒಂದು ಸ್ಟೇಟ್‌ಮೆಂಟ್ ಸರ್ಕಾರ ಮಾಡುವ ಹಾಗೆ ಮಾಡಲಿ. The point is this, you are not going to be disappointed, Mr.Kharge. I am very fair. Some of these things, they will guide this House in future. If the meeting subsequently held is not a

legitimate meeting as per the provisions of the law, the proceedings cannot be held valid. If there is provision under the law for such a meeting, then the proceedings will acquire the validity. Let them get the information by evening and make statement on the Floor of the House.

(INTERRUPTIONS)

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾವು ಒಂದು ಲ್ಯಾಕ್ಟ್ ಪುಸ್ತಕವನ್ನು ತರಿಸಿಕೊಂಡು ಹೇಳೋಣವೆಂದರೆ ಹದಿನೈದು ನಿಮಿಷಗಳಿಂದ ಕೇಳುತ್ತಿದ್ದೇವೆ. ಇಲ್ಲಿ ಕುಳಿತಿರುವವರ ಪರಿಸ್ಥಿತಿ ಈ ರೀತಿಯಾಗಿದೆ.

MR SPEAKER:- To make things more clear to the Hon'ble leader of the Opposition..

SRI H.N.NANJEGOWDA:- Sir, before you pronounce, I have one submission.

MR. SPEAKER:- I have not pronounced anything.

SRI H.N.NAJEGOWDA:- We cannot assume the role of a court to interpret these things. There are different forums to question these things. For a moment, let us think. This should not become a court.

MR. SPEAKER:- That is what exactly I meant. We are not the appelate authority.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಅಲ್ಲಿರುವಂತಹ ಚೀಫ್ ಸೆಕ್ರೆಟರಿ ಅಥವಾ ಯಾರೇ ಜವಾಬ್ದಾರಿ ಅಧಿಕಾರಿಗಳು ಮಿಸ್ ಗೈಡ್ ಮಾಡಿರಬಹುದು. ಒಬ್ಬ ಅಧ್ಯಕ್ಷರು ಅಡ್ಜರ್ನ್ ಮಾಡಿ ಹೋದ ಮೇಲೆ ಇನ್ನೊಬ್ಬರು ಅಧ್ಯಕ್ಷತೆಯನ್ನು ವಹಿಸುವುದುಕ್ಕೆ ಅಲ್ಲಿ ಅವಕಾಶವನ್ನು ಮಾಡಿ ಕೊಟ್ಟಿದ್ದರೆ, ಅವರ ಮೇಲೂ ಕೂಡ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಸನ್ಮಾನ್ಯ ನಂಜೇಗೌಡರು ಹೇಳಿದಂತಹ ಮಾತುಗಳನ್ನೂ ಕೂಡ ಗಮನದಲ್ಲಿಟ್ಟುಕೊಂಡು ಈ ಸನ್ನಿವೇಶದಲ್ಲಿ ನಾನು ಹೇಳುವಂಥಾದ್ದು ಏನೆಂದರೆ ಸನ್ಮಾನ್ಯ ವಿರೋಧಪಕ್ಷದ ನಾಯಕರಿಗೆ ಮತ್ತು ಹಿರಿಯ ಮುಖಂಡರಿಗೆ ಅವರ ಕಾರ್ಯ

ಚಟುವಟಿಕೆಗಳನ್ನು ಚರ್ಚೆ ಮಾಡುವುದಕ್ಕೆ ಇದು ಸಭೆಯಲ್ಲವೆನ್ನುವ ಮಾತನ್ನು ನಾನು ಪ್ರಾರಂಭದಲ್ಲೇ ಹೇಳಿದ್ದೇನೆ. ನಾವು ಹೊಸ ಪದ್ಧತಿಯನ್ನು ಹಾಕಬೇಕಾಗುತ್ತದೆ. ಅವರಿಗೆ ಅಧಿಕಾರವಿದೆಯೊ ಅಥವಾ ಇಲ್ಲವೋ ಅದನ್ನು ಮಾಡುವುದಕ್ಕೆ ಬರುತ್ತದೆಯೋ ಅಥವಾ ಇಲ್ಲವೋ ನಮ್ಮ ಹೊಸ ಶಾಸನದ ಪ್ರಕಾರ, ಆದರೆ ಆ ಶಾಸನವನ್ನು ಮಾಡಿರುವಂಥಾದ್ದು ಈ ಸಭೆಯೇ ಆಗಿರುತ್ತದೆ. ನಾವು ಪಾಲನೆಗೆ ತಂದಿರುವಂತಹ ಶಾಸನವನ್ನು ಅನುಷ್ಠಾನಗೊಳಿಸುವಂತಹ ಸಂದರ್ಭದಲ್ಲಿ ಯಾವುದೇ ಒಂದು ಸಂಸ್ಥೆ ಎಲ್ಲಾದರೂ ವಿಫಲವಾಗಿದ್ದರೆ ಅದಕ್ಕೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಆ ಜವಾಬ್ದಾರಿಯೂ ಸರ್ಕಾರದ ಮೇಲೆ ಇರುತ್ತದೆ. ಈ ರೀತಿಯ ಒಂದು ಸಭೆಯನ್ನು ನಡೆಸಬೇಕೆಂಬ ಅಧಿಕಾರ ಕಾನೂನಿನ ಚೌಕಟ್ಟಿನಲ್ಲಿ ಅವರಿಗೆ ಇದ್ದಿದ್ದರೆ ಅದು ಬೇರೆ ವಿಷಯವಾಗುತ್ತದೆ. ಅದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲದಿದ್ದರೆ ಈ ಸದನ ಪಾಸ್ ಮಾಡಿರುವಂತಹ ಕಾನೂನಿನಲ್ಲೇ ಅದಕ್ಕೆ ಅವಕಾಶವಿಲ್ಲದೆ ಇದ್ದು ಕಾನೂನು ಬಾಹಿರವಾದಂತಹ ಸಭೆಯನ್ನುಅವರು ನಡೆಸಿ ಈ ನಡವಳಿಕೆಗಳನ್ನು ನಡೆಸಿಕೊಂಡು ಹೋಗಿದ್ದರೆ ಆ ವಿಚಾರದಲ್ಲಿ ಸಾಯಂಕಾಲದೊಳಗೆ ಸರ್ಕಾರ ಒಂದು ಹೇಳಿಕೆಯನ್ನು ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಈ ಸದನಕ್ಕೆ ಏನು ಗೌರವವಿರುತ್ತದೆ. ಆದುದರಿಂದ ನಾನು ಈ ದೃಷ್ಟಿಯಿಂದ ಹೇಳುತ್ತಾ ಇದ್ದೇನೆ. ಆದರೆ ನಾವು we will not arbitrate as the Hon'ble Member Shri H.N.Nanjegowda has put it, we will not be passing any orders. We will not be taking up the matter for arbitration. We will not convert this House into an Appellate Authority. That is an independent body by itself. But that body has come into existence, by virtue of the legislation passed by this House. This House also has a responsibility to see that the laws enacted by this House are scrupulously implemented.

ಶ್ರೀ ವಾಟಾಳ್ ನಾಗರಾಜ್: ಶಾಸನವನ್ನೇ ಗಾಳಿಗೆ ತೂರಿದಂತಹ ಘಟನೆ ನಡೆದಿರತಕ್ಕಂಥದ್ದರ ಬಗ್ಗೆ....

ಅಧ್ಯಕ್ಷರು: ಅದನ್ನೇ ನಾನು ಹೇಳಿದ್ದು, ಈ ಸದನದಿಂದ ಉದ್ಭವವಾಗಿರತಕ್ಕಂಥ ಒಂದು ಶಾಸನವನ್ನು ಅನುಷ್ಠಾನಕ್ಕೆ ತರತಕ್ಕಂಥ ಸನ್ನಿವೇಶದಲ್ಲಿ ಎಲ್ಲೇ ಕಾರ್ಯ ಲೋಪಗಳಾಗಿದ್ದರೂ ಅದು ಈ ಸದನದ ಗಮನಕ್ಕೆ ಬಂದಾಗ ಸರ್ಕಾರ ಅದರ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾದದ್ದು ಅವರ ಪ್ರಮುಖವಾದ ಜವಾಬ್ದಾರಿ. ಅವರಿಗೆ ಪೂರ್ಣ ಮಾಹಿತಿ ಲಭ್ಯವಾಗಿಲ್ಲದೆ ಇರುವುದರಿಂದ ಸಾಯಂಕಾಲದೊಳಗಾಗಿ ವರದಿಯನ್ನು ತಂದು ಸಭೆಗೆ ಒಪ್ಪಿಸಲಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸಭಾಧ್ಯಕ್ಷರೆ, ಕಾನೂನಿನಲ್ಲಿ ಇದಕ್ಕೂ ಅವಕಾಶ ಮಾಡಿ. Contrary to law if any resolution is passed, that can be struck down by the Government. ಸರ್ಕಾರಕ್ಕೆ ಸಂಪೂರ್ಣವಾದ ಅಧಿಕಾರವಿದೆ. ಕಾನೂನಿನ ವಿರುದ್ದ ಯಾವುದೇ ರೆಸಲ್ಯೂಷನ್ ಮಾಡಲಿ, ಅಥವಾ ಯಾವುದೇ ಒಂದು ಆ್ಯಕ್ಷನ್ ತೆಗೆದುಕೊಳ್ಳಲಿ ಅದು ಕಾನೂನು ಬಾಹರವಾಗಿದ್ದರೆ ಆ ರೆಸಲ್ಯೂಷನನ್ನು ತಡೆಹಿಡಿಯತಕ್ಕಂಥದ್ದು ಅದನ್ನು ನಿಲ್ಲಿಸುತಕ್ಕಂಥದ್ದು ಅಥವಾ ಕ್ಯಾನ್ಸಲ್ ಮಾಡತಕ್ಕಂಥ ಅಧಿಕಾರ ಕೂಡ ಇದೆ ನಾನು ತಮ್ಮ ಮಾತಿಗೆ ಒಪ್ಪುತ್ತೇನೆ. ತಾವು ಇದರ ಬಗ್ಗೆ ಸಾಕಷ್ಟು ವಿಚಾರ ಮಾಡಿ ಈ ದಿನ ಸಲಹೆ ಕೊಟ್ಟಿರುವುದನ್ನು ನಾನು ಒಪ್ಪುತ್ತೇನೆ. ಒಂದು ಕಡೆ ಅವರು ಇಂಟರ್‌ಪಿಟ್ ಮಾಡುತ್ತಾ ಇದ್ದಾರೆ. ಹೋದ ಮೇಲೆಯೂ ಕೂಡ ಅಲ್ಲಿ ಇದ್ದು ಪಾಸ್ ಮಾಡತಕ್ಕಂಥ ಅಧಿಕಾರ ಸದಸ್ಯರಿಗೆ ಇತ್ತೋ ಇಲ್ಲವೋ ಇದೆ ಅದರ ಬಗ್ಗೆ ವಿಚಾರ ಮಾಡಬೇಕು ಎನ್ನುವಂಥ ವಾದ ಅವರು ಇಟ್ಟಿದ್ದಾರೆ, ಇಲ್ಲ ಎಂದು ನಾವು ಹೇಳುತ್ತೇವೆ. ಇದು ಕಾನೂನಿನ ಬಗ್ಗೆ ಒಂದು ತೀರ್ಪು. ಆದರೆ ಇಂತಹ ಒಂದು ಕೃತ್ಯಗಳಿಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರದವರೇ ಕಾರಣಿಭೂತರಾದರೆ ಹೇಗೆ ಎಂಬುದನ್ನು ನಾನು ಕೇಳುತ್ತೇನೆ. They should not do it. They have become a party.

SRI M.C.NANAIAH:- Kindly bear with us now. Hon'ble Speaker Sir, there is a very clear provision in the Act. It is, Section 197, sub clause (3). I will read it to the knowledge of this House. "The Chief Executive shall, within 15 days from the date of the meeting of the Zilla Panchayat or any of its Committees, submit to the Government every resolution of the Zilla Panchayat or any of its Committees which, in his opinion, is inconsistent with the provisions of this Act or any other Law, and he shall not implement such resolutions otherwise than as decided by the Government." In the light of the discussion that has taken place, we are going to get all the particulars from the Chief Executive Officer and if it is not in accordance with the law, we are not in a position to implement it either. There is a provision in the Act itself.

SRI M.MALLIKARJUNA KHARGE:- Knowing fully

well, why do you do it ಎಂದರು ನಾನು ಕೇಳುತ್ತಿರುವುದು.

ಶ್ರೀ ಎಂ.ಸಿ.ನಾಣಯ್ಯ: ನನಗೆ ಗೊತ್ತಿಲ್ಲ. ಆ ಬಾಡಿಯವರು ಮಾಡಿರತಕ್ಕಂಥ ಕೆಲಸವನ್ನು ಕಾನೂನಿಗೆ ಅನುಗುಣವಾಗಿ ಮಾಡಿದ್ದಾರೆಯೇ ಇಲ್ಲವೇ ಎನ್ನುವಂಥ ಪ್ರಶ್ನೆಯನ್ನು ತಾವು ಎತ್ತಿದ್ದೀರಿ. ಮಾನ್ಯ ಅಧ್ಯಕ್ಷರು ಹೇಳುವಂತೆ ಚೀಫ್ ಎಕ್ಸಿಕ್ಯೂಟೀವ್ ಆಫೀಸರ್‌ರವರಿಂದ ನಾವು ರಿಪೋರ್ಟ್‌ನ್ನು ತರಿಸುತ್ತಿದ್ದೇವೆ. ಕಾನೂನು ಪ್ರಕಾರ ಆಗಿಲ್ಲ ಎಂಬುದು ಅವರದ್ದೇ ಒಂದು ಮಾಹಿತಿ ಆದರೆ ಆ ರೆಸಲ್ಯೂಷನನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಅವರ ಕೈಯಿಂದ ನಾವು ವರದಿಯನ್ನು ತರಿಸುತ್ತಿದ್ದೇವೆ. ವರದಿಯನ್ನು ತರಿಸತಕ್ಕಂಥದ್ದರಲ್ಲಿ ಕಾನೂನಿಗೆ ವಿರೋಧ ಎಂದು ಗೊತ್ತಾದರೆ ಅವರಿಗೆ ಇಂಪ್ಲಿಮೆಂಟ್ ಮಾಡುವ ಅಧಿಕಾರವೇ ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೇ, ತಾವು ಏನು ಹೇಳುತ್ತೀರಿ, ಅದನ್ನು ನಾವು ಕೇಳುತ್ತೇವೆ. ನಾವು ಹೇಳಿದ ಪ್ರಶ್ನೆಗಳಿಗೆ ಸ್ಟೇಟ್‌ಮೆಂಟ್ ಕೊಡಿ: 3 ಗಂಟೆವರೆಗೆ ವೈಟ್ ಮಾಡುತ್ತೇವೆ. ಸಾಯಂಕಾಲದ ತನಕ ವೈಟ್ ಮಾಡುತ್ತೇವೆ.

ಅಧ್ಯಕ್ಷರು: ಇಂತಹ ವಿಚಾರಗಳಲ್ಲಿ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ. ಇಂತಹ ವಿಚಾರಗಳಲ್ಲಿ ತಾವು ಪ್ರತಿಷ್ಠೆಯನ್ನು ಪಣಕ್ಕೆ ಇಡುವುದು ಬೇಡ. ಯಾರು ಯಾವಾಗ ಯಾವ ಸನ್ನಿವೇಶದಲ್ಲಿ ಯಾವ ಕಡೆಗೆ ಇರುತ್ತಾರೆ ಎನ್ನತಕ್ಕಂಥದ್ದು ಅದು ನಮಗೆ ಗೊತ್ತಿಲ್ಲ. ಇವು ಮೂಲಭೂತ ಸಿದ್ಧಾಂತಗಳಿಗೆ ಸಂಬಂಧಿಸಿದ ವಿಚಾರ. ಈ ರೀತಿ ಮಾಡತಕ್ಕಂಥದ್ದು ಸಾಧುವೇ, ಮಾಡುವುದಕ್ಕೆ ಅವಕಾಶ ಕೊಡಬಹುದೇ, ಕೊಡಬಾರದೇ ಎನ್ನತಕ್ಕಂಥದನ್ನು ನಾವು we have to discuss. The Government, in principle, have agreed to get a detailed report and make a statement latest by evening. ಇದರಲ್ಲಿ ಪಾರ್ಟಿಪಂಗಡ ಮತ್ತೊಂದನ್ನು ನಾವು ನೋಡುವುದು ಬೇಡ; ತಲೆಕೆಡಿಸಿಕೊಳ್ಳುವುದು ಬೇಡ. The whole matter revolves around one issue. ಪ್ರೆಸೀಡೆಂಟ್ ಆಗುವ ವೇಳೆಗೆ ಅವರಿಗೆ ಮೆಜಾರಿಟಿ ಇತ್ತು ಆದ ಬಳಿಕ ಇವರಿಗೆ ಮೆಜಾರಿಟಿಯಾಯಿತು. These things happen.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆದರೆ ಸಬ್ಸಿಡರಿ ಥಿಂಗ್ಸ್ ಏನೆಂದರೆ ಇದಕ್ಕೆ ಕಾರಣಕರ್ತರು ಯಾರು ಎನ್ನುವುದು ಗೊತ್ತಾಗಬೇಕಲ್ಲಾ. ಏತಕ್ಕೆ ಒತ್ತಾಯಪೂರ್ವಕವಾಗಿ ಮಾಡಿಸುತ್ತಿದ್ದಾರೆ. ಏಕೆ ಮಿಸ್‌ಬಿಹೇವ್ ಮಾಡುತ್ತಾ ಇದ್ದಾರೆ, ವಿತ್ ರೆಸ್ಪಾನಿಸಿಬಲ್ ಪೋಸ್ಟ್....

ಶ್ರೀ ಸಿದ್ಧರಾಮಯ್ಯ: ಯಾರೇ ಆದರೂ ಕೂಡ ಕಾನೂನಿಗೆ ವಿರುದ್ಧವಾಗಿ ಮಾಡುವುದಕ್ಕಾಗುವುದಿಲ್ಲ. ಅದನ್ನು ಯಾರೇ ಮಾಡಿದರೂ ಕೂಡ ತಪ್ಪಾಗುತ್ತದೆ.

MR. SPEAKER:- What I request is, the Hon'ble Leader of Opposition as well as our other Members, you have ample opportunities to raise this issue which you have mentioned, during the current Session. We will defer this matter. I am deferring it with your consent.

ಶ್ರೀ ಹೆಚ್.ಎನ್.ನಂಜೇಗೌಡ: ಇದು ಕಾನೂನು ಬಾಹಿರ ಅಂದರೆ ಅದನ್ನು ಇಂಪ್ಲಿಮೆಂಟ್ ಮಾಡುವುದಿಲ್ಲ ಅಲ್ಲವೇ ಮಾನ್ಯ ನಾಣಯ್ಯನವರೇ? ಈ ಕಾನೂನು, ಕಾನೂನು ಬಾಹಿರವಾಗಿರತಕ್ಕಂಥ ಕೆಲಸಗಳಿಗೆ ನಿಮ್ಮ ಮಂತ್ರಿಗಳು ಹೋಗಿ ಪಾರ್ಟಿಗಳು ಆಗಿದ್ದರೆ ಅವರನ್ನು ಡಿಸ್‌ಮಿಸ್ ಮಾಡುತ್ತೀರೋ?

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಯವರು): ಈ ರೀತಿ ಅಸಂಘ್‌ಷನ್ ಏಕೆ? Why do you form an assumption like that?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: 20 ವರ್ಷಗಳ ಹಿಂದಿನ ಕಾಪಿ ಪ್ರಕರಣಕ್ಕೆ ಸಂಬಂಧಿಸಿದಂತೆ ನೀವು ಡಿಸ್‌ಮಿಸ್ ಮಾಡುತ್ತಿದ್ದೀರಿ. ಇದರಲ್ಲಿ ಮಾಡುವುದಕ್ಕೆ ಬರುವುದಿಲ್ಲವೇ?

ಶ್ರೀ ಸಿದ್ದರಾಮಯ್ಯ: ಇನ್‌ಫರ್ಮೇಷನ್ ಬರಲಿ. ಇನಫರ್‌ಮೇಷನ್ ಎಲ್ಲಾ ಬಂದ ಮೇಲೆ we will make a statement. Let us see.

ಶ್ರೀ ಹೆಚ್.ಎನ್.ನಂಜೇಗೌಡ: ಇವರಿಗೆ ಕನ್‌ವಿನಿಯೆಂಟ್ ಆದಾಗೆಲ್ಲಾ.... Government being an appellate authority to the Zilla Parishat, why should they go and participate in these meetings?

SRI SIDDARAMAIAH:- They are entitled to participate.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ರಿವ್ಯೂ ಮಾಡುವುದಕ್ಕೆ ಹೋಗಿಲ್ಲ, ಒತ್ತಾಯ ಮಾಡುವುದಕ್ಕೆ ಹೋಗಿದ್ದೀರಿ.

ಶ್ರೀ ಸಿದ್ದರಾಮಯ್ಯ: ಸಭೆಗಳಿಗೆ ಹೋಗುವುದಕ್ಕೆ ಶಾಸಕರಿಗೆ ಕಾನೂನಿನಲ್ಲಿ ಅವಕಾಶವಿದೆ.

ಶ್ರೀವಾಟಾಳ್ ನಾಗರಾಜ್: ಮಂತ್ರಿಗಳಾದವರು ಸಭೆಗಳಲ್ಲಿ ಭಾಗವಹಿಸಬಾರದು ಎಂದು ಏನೂ ಇಲ್ಲ. ಆದರೆ ಭಾಗವಹಿಸಿ ತಮ್ಮ ಅಧಿಕಾರವನ್ನು ಚಲಾಯಿಸಿ ಅಲ್ಲಿ ತಮ್ಮ

ಪ್ರಭಾವವನ್ನು ಬೀರಿ, ತಮ್ಮ ಇಚ್ಛೆ ಬಂದಂತೆ ನಿರ್ಣಯ ಮಾಡುವುದಕ್ಕೆ ಅಲ್ಲ, ಅದು ಆಗಬಾರದು ಎಂದು.

ಶ್ರೀ ಡಿ.ಆರ್.ಪಟೇಲ್: ಚುನಾವಣೆ ಎಂದು ಏನು ಕರೆದಿರುತ್ತಾರಲ್ಲಾ, ಆ ಸಭೆಯಲ್ಲಿ ಶಾಸಕರಿಗೆ ಮತದಾನದ ಹಕ್ಕಿಲ್ಲ. ನಾವು ಭಾಗವಹಿಸುವುದಕ್ಕೆ ಅವಕಾಶವಿಲ್ಲ. ಚುನಾವಣೆಗೆ ಮಾತ್ರ ಕರೆದಂಥ ಸಭೆಯಲ್ಲಿ....

ಅಧ್ಯಕ್ಷರು: ಈಗ ಸುರೇಶ್‌ಕುಮಾರ್‌ರವರೇ ತಾವು ಪ್ರಸ್ತಾಪ ಮಾಡಿ.

(ಆ) ಬೆಂಗಳೂರು ನಗರದ ಯಶವಂತಪುರದಲ್ಲಿರುವ ಸುಬೇದಾರ್ ಪಾಳ್ಯದ ಹಿರಿಯ ಪ್ರಾಥಮಿಕ ಶಾಲೆಗೆ ಸಂಬಂಧಿಸಿದಂತೆ.

+ ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಸಭಾಧ್ಯಕ್ಷರೆ, ನಿನ್ನೆ ಬೆಂಗಳೂರಿನಲ್ಲಿ ನಡೆದಂಥ ಘಟನೆ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಾ ಬೆಂಗಳೂರಿನಲ್ಲಿ ಸರ್ಕಾರಿ ಶಾಲೆಗಳ ಬಗ್ಗೆ....

ಅಧ್ಯಕ್ಷರು: ಒಂದೇ ಒಂದು ನಿಮಿಷ ಗೈಡ್ ಮಾಡಿಬಿಡುತ್ತಿದ್ದೇನೆ. ಈಗ ಶೂನ್ಯವೇಳೆ ಪ್ರಾರಂಭ ಮಾಡುತ್ತೇವೆ. ಶೂನ್ಯ ವೇಳೆಯಲ್ಲಿ ಡಿಸ್‌ಕಷನ್ ಇರುವುದಿಲ್ಲ. ಪ್ರಸ್ತಾಪ ಮಾಡುವವರು ಒಂದೂವರೆಯಿಂದ ಎರಡು ನಿಮಿಷದೊಳಗಾಗಿ ಮುಗಿಸಬೇಕು. The Government should give the reply. That will be the procedure. Please all of you should adhere to the procedure.

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ): ಸರ್ಕಾರಿ ಶಾಲೆಗಳ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಒಂದು ಉದಾಸೀನ ಪ್ರವೃತ್ತಿ ಏನಿದೆ, ಅದಕ್ಕೆ ಒಂದು ತಾಜಾ ಉದಾಹರಣೆ ನಿನ್ನೆ ಬೆಂಗಳೂರಿನಲ್ಲಿ ನಡೆದಿದೆ. 1940ನೇ ಇಸವಿಯಿಂದ ಅಸ್ತಿತ್ವದಲ್ಲಿ ಒಂದು ಶಾಲೆ ಇತ್ತು. ಅದನ್ನು ಮುಂಚೆ ವೈಯಾಳಿ ಕಾವಲ್ ಮಾದರಿ ಪ್ರಾಥಮಿಕ ಶಾಲೆ ಎಂದು ಕರೆಯುತ್ತಾ ಇದ್ದರು. ಅದರ ನಂತರ ಹೆಚ್.ಮುನಿಸ್ವಾಮಿರೆಡ್ಡಿ ಸರ್ಕಾರಿ ಮಾದರಿ ಶಾಲೆ ಎಂದು ಕರೆದರು. ಸುಮಾರು 800 ಜನ ಬಾಲಕ-ಬಾಲಕಿಯರು ಆ ಶಾಲೆಯಲ್ಲಿ ಓದುತ್ತಾ ಇದ್ದಾರೆ. ಪರಿಸ್ಥಿತಿ ಹೀಗಿರುವಾಗ ಯಾರೋ ಗೋವಿಂದರೆಡ್ಡಿ ಎನ್ನುವ ಒಬ್ಬ ವ್ಯಕ್ತಿ ಶಾಲೆಯ ಮೇಲೆ ಕೇಸ್ ಹಾಕಲಿಲ್ಲ. ಶಿಕ್ಷಣ ಇಲಾಖೆಯ ಮೇಲೆ ಕೇಸು ಹಾಕಲಿಲ್ಲ. ಆದರೆ ಯಾವುದೋ ಅಂದು ಬೆಟರ್‌ಮೆಂಟ್ ಕಮಿಟಿಯ ಮೆಂಬರ್ ಆಗಿದ್ದ ತಿಮ್ಮಪ್ಪಯ್ಯ ಎನ್ನುವ ವ್ಯಕ್ತಿಯ ಮೇಲೆ 1980ನೇ ಇಸವಿಯಲ್ಲಿ ಕೇಸು ಹಾಕಿ 17 ವರ್ಷ ಕೇಸು ನಡೆದಿದೆ. ನಿನ್ನೆ ಎಕ್ಸಿಕ್ಯೂಷನ್ ಆರ್ಡರನ್ನು ತಂದು ಪೋಲೀಸರ ನೆರವನ್ನು ತೆಗೆದುಕೊಂಡು ಆ ಶಾಲೆಯ ಕಟ್ಟಡವನ್ನು